## 37

# ಫರಿಸಾಯರೊಂದಿಗೆ ಘರ್ಷಣೆ

# (15:1-20)

15ನೇ ಅಧ್ಯಾಯವು ಯೇಸು ಮತ್ತು ಆತನ ಸೇವೆಯ ಕುರಿತಾಗಿ ಜನರಿಗೆ ಇರುವ ಪ್ರತಿಕ್ರಿಯೆಗಳ ಮೇಲೆ ಬೆಳಕನ್ನು ಚೆಲ್ಲುತ್ತದೆ. ಇದು ಫರಿಸಾಯರೊಂದಿಗೆ ಘರ್ಷಣೆಯಲ್ಲಿ ಪ್ರಾರಂಭವಾಗುತ್ತದೆ, ಅವರು ಮಾನವ ನಿರ್ಮಿತ ಸಂಪ್ರದಾಯಗಳನ್ನು ಯೇಸು ಮತ್ತು ಆತನ ಶಿಷ್ಯರ ಮೇಲೆ ಹೇರಬೇಕೆಂದು ಪ್ರಯತ್ನಿಸುತ್ತಿದ್ದರು (15:1-20). ನಂತರ, ಆತನು ಫೊಯಿನೀಕೆ ಸಮುದ್ರದ ದಂಡೆಗೆ ಹಿಂತಿರುಗಿ ಹೋದಮೇಲೆ, ತನ್ನ ಮಗಳ ಸ್ವಸ್ಥತೆಯನ್ನು ಬಯಸಿದ್ದ ಕಾನಾನ್ಯ ಸ್ತ್ರೀಯನ್ನು ಯೇಸು ಸಂಧಿಸಿದನು. ಯೇಸು ಅವಳಲ್ಲಿರುವ ಶ್ರೇಷ್ಟವಾದ ಮತ್ತು ತಣಿಸಲಾರದ ನಂಬಿಕೆಯನ್ನು ಪ್ರಶಂಶಿಸಿದನು (15:21-28). ಈ ಅಧ್ಯಾಯವು ಯೇಸು ಜನ ಸಮೂಹದಲ್ಲಿ ಅದ್ಭುತಕಾರ್ಯಗಳನ್ನು ಮಾಡುತ್ತಿರುವದರೊಂದಿಗೆ ಮುಕ್ತಾಯವಾಗುತ್ತದೆ (15:29-39). ಆತನು ರೋಗಿಗಳನ್ನು ಸ್ವಸ್ಥಪಡಿಸುವದನ್ನು ನೋಡಿ ಅವರು ಇಸ್ರಾಯೇಲ್ಯರ ದೇವರನ್ನು ಸ್ತುತಿಸುವದಕ್ಕೆ ಪ್ರೇರೆಪಣೆಯನ್ನು ಹೊಂದಿದರು. ಕನಿಕರದಿಂದ, ಯೇಸು ತನ್ನನ್ನು ಹಿಂಬಾಲಿಸಿದ ಜನಸಮೂಹಕ್ಕೆ ಊಟಮಾಡಿಸಿದನು, ಆ ಗುಂಪಿನಲ್ಲಿ ನಾಲ್ಕು ಸಾವಿರ ಜನರು ಸೇರಿಬಂದಿದ್ದರು.

### ಮನುಷ್ಯನು ಮಾಡಿದ ಸಂಪ್ರದಾಯಗಳಿಗೂ ದೇವರ ನಿಯಮಕ್ಕೂ ಪ್ರತಿಸ್ಪರ್ದೆ (15:1-9)

**1ಆಗ ಯೆರೂಸಲೇಮಿನಿಂದ ಫರಿಸಾಯರೂ 2ಶಾಸ್ತ್ರಿಗಳೂ ಯೇಸುವಿನ ಬಳಿಗೆ ಬಂದು**
**- ನಿನ್ನ ಶಿಷ್ಯರು ಹಿರಿಯರಿಂದ ಬಂದ ಸಂಪ್ರದಾಯವನ್ನು ಯಾಕೆ ಮೀರುತ್ತಾರೆ? ಅವರು**
**ಕೈ ತೊಳಕೊಳ್ಳದೆ ಆಹಾರ 3ತೆಗೆದುಕೊಳ್ಳುತ್ತಾರಲ್ಲಾ ಎಂದು ಕೇಳಿದ್ದಕ್ಕೆ ಆತನು ಅವರಿಗೆ**
**ಉತ್ತರಕೊಟ್ಟದ್ದೇನೆಂದರೆ - ನೀವು ಸಹ ನಿಮ್ಮ ಸಂಪ್ರದಾಯದ ನಿಮಿತ್ತ ದೇವರ ಆಜ್ಞೆಯನ್ನು**
**ಯಾಕೆ ಮೀರುತ್ತೀರಿ? 4ಹೇಗಂದರೆ ತಂದೆತಾಯಿಗಳನ್ನು ಸನ್ಮಾನಿಸಬೇಕೆಂತಲೂ**
**ತಂದೆಯನ್ನಾಗಲಿ ತಾಯಿಯನ್ನಾಗಲಿ ದೂಷಿಸುವವನಿಗೆ ಮರಣದಂಡನೆ ಆಗಬೇಕೆಂತಲೂ**
**ದೇವರು ಹೇಳಿದ್ದಾನೆ. 5ನೀವೋ ಯಾವನಾದರೂ ತನ್ನ ತಂದೆಯನ್ನಾಗಲಿ ತಾಯಿಯನ್ನಾಗಲಿ**
**ನೋಡಿ - ನಾನು ನಿನ್ನ ಸಂರಕ್ಷಣೆಗಾಗಿ ಕೊಡತಕ್ಕದ್ದನ್ನು ದೇವರಿಗಾಗಿ ಇಟ್ಟಿದ್ದೇನೆ ಎಂದು**
**6ಹೇಳುವದಾದರೆ ಅವನಿಗೆ ತನ್ನ ತಂದೆತಾಯಿಗಳನ್ನು ಸನ್ಮಾನಿಸಬೇಕಾದದ್ದಿಲ್ಲ ಅನ್ನುತ್ತೀರಿ.**
**ಹೀಗೆ ನಿಮ್ಮ ಸಂಪ್ರದಾಯದ ನಿಮಿತ್ತ ದೇವರ ವಾಕ್ಯವನ್ನು ನಿರರ್ಥಕ ಮಾಡಿದ್ದೀರಿ.**
**7ಕಪಟಿಗಳೇ, ನಿಮ್ಮ ವಿಷಯದಲ್ಲಿ ಯೆಶಾಯನು ವಿಹಿತವಾಗಿ ಪ್ರವಾದಿಸಿದ್ದಾನೆ; ಅವನು**
**ಬರೆದದ್ದೇನಂದರೆ -**

**8ಈ ಜನರು ಮಾತಿನಿಂದ ನನ್ನನ್ನು ಸನ್ಮಾನಿಸುತ್ತಾರೆ,**
**ಆದರೆ ಅವರ ಮನಸ್ಸು ನನಗೆ ದೂರವಾಗಿದೆ.**
**9ಮನುಷ್ಯರು ಕಲ್ಪಿಸಿದ ಕಟ್ಟಳೆಗಳನ್ನೇ ಅವರು**
**ಬೋಧಿಸುವದರಿಂದ ನನಗೆ ಭಕ್ತಿ ತೋರಿಸುವದು ವ್ಯರ್ಥ ಎಂಬುದೇ.**

**ವಚನ 1. ಯೇಸುವಿನ** ಜನಪ್ರಿಯತೆ ನಿರಂತರವಾಗಿ ಹರಡಿತು, ಗಲಿಲಾಯದ

ಅಂತಿಫಸ್ ಹೆರೋದನ ಗಮನವನ್ನು ಸೆಳೆಯುವದು ಮಾತ್ರವಲ್ಲ (14:1, 2). **ಯೆರೂಸಲೇಮಿನಲ್ಲಿರುವ** ಯೆಹೂದ್ಯ ನಾಯಕರುಗಳ ಗಮನವನ್ನು ಕೂಡ ಸೆಳೆದನು. ಆತನ ಸೇವೆಯ ಪ್ರಾರಂಭದಿಂದ, ಯೇಸುವಿಗೆ ಯೆರೂಸಲೇಮಿನಲ್ಲಿ ಆತನು ವಾಸಿಸುವ ಹಿಂಬಾಲಕರಿದ್ದರು (4:25). ಇಲ್ಲಿಯವರೆಗೆ ಆತನು ಪವಿತ್ರ ಪಟ್ಟಣಕ್ಕೆ ಎರಡು ಸಾರಿ ಬೇಟಿಕೊಟ್ಟಿದನು (ಯೋಹಾನ 2:13; 5:1).

ಯೆರೂಸಲೇಮಿನಲ್ಲಿದ್ದ ನಾಯಕರು ಪಾಲೇಸ್ತೀನ ದೇಶದಲ್ಲಿ ಯೇಸುವಿನ ಚಟುವಟಿಕೆಯ ಕುರಿತು ವಿಚಾರಣೆಯನ್ನು ಮಾಡಲು ಪ್ರತಿನಿಧಿಗಳನ್ನು ಕಳುಹಿಸುತ್ತಿದ್ದರು (ನೋಡಿರಿ ಯೋಹಾನ 1:19-28). ಹಿಂದೆ ಆತನು ಸುಂಕದವರು ಮತ್ತು ಪಾಪಿಗಳ ಸಂಗಡ ಊಟಮಾಡಿದಾಗ ಮತ್ತು ಸಬ್ಬತ್ ದಿನದ ಸಂಪ್ರದಾಯವನ್ನು ಮುರಿದಾಗ ಗಲಿಲಾಯದಲ್ಲಿರುವ ಸ್ಥಾನಿಕ ನಾಯಕರನ್ನು ಎಚ್ಚಿಸಿದ್ದನು (9:11, 34; 12:2, 14). ಆತನು ತನ್ನ ಬಳಿಗೆ ಕರೆತಂದ ಮನುಷ್ಯನಿಗೆ ನಿನ್ನ ಪಾಪಗಳು ಕ್ಷಮಿಸಲ್ಪಟ್ಟಿವೆ ಎಂದು ಹೇಳುವದರ ಮೂಲಕ ಅವರನ್ನು ಕೆರಳಿಸಿದ್ದನು (9:2, 3). ಆದುದರಿಂದ, ಯೇಸುವಿನ ಬೋಧನೆಯನ್ನು ಬೆದರಿಕೆ ಎಂದು ನೋಡಿದ್ದರಿಂದ, ಯೆರೂಸಲೇಮಿನಲ್ಲಿದ್ದ ನಾಯಕರು ಅವನಿಗೆ ಅವಮಾನವನ್ನು ಉಂಟುಮಾಡುವಂತೆ ಒಂದು ಗುಂಪನ್ನು ಗಲಿಲಾಯಗೆ ಕಳುಹಿಸಿದ್ದರು. ಮಾರ್ಕನ ಪ್ರಕಾರ, ಮೊದಲಿನ ಘರ್ಷಣೆ - ಯೇಸು ಬೆಲ್ಜೆಬೂಲನನ್ನು ವಶಪಡಿಸಿಕೊಂಡಿದ್ದಾನೆಂದು ಮತ್ತು ಯೆರೂಸಲೇಮಿನಿಂದ ಆಕಸ್ಮಿಕವಾಗಿ ಉತ್ಪತ್ತಿಯಾಗಿದ್ದಾನೆಂದು ದೂರಿದ್ದರು (ಮಾರ್ಕ 3:22; ನೋಡಿರಿ ಮತ್ತಾಯ 9:34; 12:24). ಈ ಯೆಹೂದ್ಯ ನಾಯಕರು ತಾವು ಈ ಹಿಂದೆ ಮಾಡಿದ ಪ್ರಯತ್ನಗಳಿಗಿಂತ ತಮ್ಮ ಈಗಿನ ಪ್ರಯತ್ನಗಳು ಹೆಚ್ಚು ಯಶಸ್ವಿಯಾಗುತ್ತವೆ ಎಂದು ಅವರು ನಂಬಿದ್ದರಲ್ಲಿ ಸಂದೇಹವಿರಲಿಲ್ಲ.

ಯೆರೂಸಲೇಮಿನಿಂದ ಕಳುಹಿಸಲ್ಪಟ್ಟವರಲ್ಲಿ ಕೆಲವು **ಶಾಸ್ತ್ರಿಗಳೆಂದು** ಗುರುತಿಸಲ್ಪಟ್ಟಿದ್ದಾರೆ. ಈ ಮನುಷ್ಯರು ಹಳೆ ಒಡಂಬಡಿಕೆಯ ವಾಕ್ಯಭಾಗವನ್ನು ಮತ್ತು ಇತರ ನ್ಯಾಯ ಸಮ್ಮತವಾದ ದಾಖಲೆಗಳನ್ನು ನಕಲು ಮಾಡುತ್ತಿದ್ದರು. ಪವಿತ್ರ ಪಠ್ಯವು ಚಿರಪರಿಚಿತವಾಗಿರುವದರಿಂದ ಅವರು ಅದನ್ನು ಅರ್ಥೈಸುವಲ್ಲಿ ಮುಖ್ಯಸ್ಥರಾಗಿದ್ದರು (2:4; 5:20; 7:29). ಅವರನ್ನು "ಧರ್ಮೋಪದೇಶಕ" (22:35) ಮತ್ತು "ನ್ಯಾಯಶಾಸ್ತ್ರಿಗಳು" (ಲೂಕ 5:17) ಎಂದು ಸಹ ಕರೆಯುತ್ತಿದ್ದರು. ಅವರ ವೃತ್ತಿಯಿಂದಾಗಿ, ಅವರು ಧರ್ಮಶಾಸ್ತ್ರದ ಜ್ಞಾನವುಳ್ಳವರು ಎಂದು ಗುರುತಿಸಲ್ಪಡುತ್ತಿದ್ದರು.

**ಫರಿಸಾಯರು** ("ಪ್ರತ್ಯಕಿಸಲ್ಪಟ್ಟವರು") ಯೆಹೂದ್ಯರಲ್ಲಿ ಅತ್ಯಂತ ದೊಡ್ಡ ಪಂಥದವರಾಗಿದ್ದರು. ಅಂದಿನ ದಿನಗಳಲ್ಲಿ ಅವರು ಕಾನೂನು ಪಂಡಿತರಾಗಿದ್ದರು (ನೋಡಿರಿ 23:1-10), ಬರೆದಿಟ್ಟ ಧರ್ಮಶಾಸ್ತ್ರ ಮತ್ತು ಬಾಯಿಮಾತಿನ ಸಂಪ್ರದಾಯಗಳಿಗೆ ಬಲವಾಗಿ ಅಂಟಿಕೊಂಡಿದ್ದರು. ಅವರು ಯೆಹೂದ್ಯರ ಮಧ್ಯದಲ್ಲಿ Antiochus Epiphanes ಹೆಸರಿನಲ್ಲಿ ಗ್ರೀಕ್ ಸಂಸ್ಕೃತಿಯ ಅಭಿವೃದ್ಧಿಯನ್ನು ವಿರೋಧಿಸಿದ್ದರು.[1] ಸದ್ದುಕಾಯರಿಗೆ ಭಿನ್ನವಾಗಿ ಅವರು ಪುನರುತ್ಥಾನದ ಮತ್ತು ಆತ್ಮದ ನಿತ್ಯತೆಯ ಸಿದ್ಧಾಂತಗಳನ್ನು ಹಿಡಿದುಕೊಂಡವರಾಗಿದ್ದರು. ಅವರು ಭವಿಷ್ಯತ್ತಿನ ಬಹುಮಾನ ಮತ್ತು ಶಿಕ್ಷೆಯ ವಿಷಯದ ಸಿದ್ಧಾಂತಗಳನ್ನು ಸಹ ನಂಬಿದ್ದರು (ಅಪೊಸ್ತಲರ ಕೃತ್ಯಗಳು 23:8; ನೋಡಿರಿ 3:7ರ ಮೇಲಿನ ವ್ಯಾಖ್ಯಾನ). ಅದೇ ಸಮಯದಲ್ಲಿ ಎಲ್ಲಾ ಫರಿಸಾಯರು ಶಾಸ್ತ್ರಿಗಳಾಗಿರಲಿಲ್ಲ, ಶಾಸ್ತ್ರಿಗಳು ಹೆಚ್ಚಾದವರು ಫರಿಸಾಯರ ಸಂಘದ ಸದಸ್ಯರಾಗಿದ್ದರು.[2]

**ವಚನ 2.** ಶಾಸ್ತ್ರಿಗಳ ಮತ್ತು ಫರಿಸಾಯರ ಪ್ರಶ್ನೆ ಮಾಹಿತಿಯನ್ನು ಹೊಂದುವ ಬೇಡಿಕೆಗಿಂತ ಹೆಚ್ಚಾಗಿ ದೂರಾಗಿತ್ತು. ಇನ್ನೊಂದು ಸಮಯದಲ್ಲಿ, ಫರಿಸಾಯರು ಯೇಸು ಊಟಕ್ಕೆ ಪೂರ್ವದಲ್ಲಿ ಸಂಪ್ರದಾಯಿಕವಾಗಿ ತನ್ನ ಕೈಗಳನ್ನು ತೊಳೆಯದೇ ಇದ್ದದರಿಂದ ಆಶ್ಚರ್ಯವನ್ನು ಪ್ರದರ್ಶಿಸಿದರು (ಲೂಕ 11:38).

ರಬ್ಬಿಗಳು ತಮ್ಮ ವಿದ್ಯಾರ್ಥಿಗಳ ನಡತೆಗೆ ಕಾರಣರು ಎಂದು ನಂಬಿದ್ದರಿಂದ, ಯೇಸು ತನ್ನ

**ಶಿಷ್ಯರ** ವರ್ತನೆಯಿಂದ ಟೀಕಿಸಲ್ಪಡುತ್ತಿದ್ದನು (ನೋಡಿರಿ 9:14; 12:2). ಶಿಷ್ಯರ ವರ್ತನೆಯು ಯೇಸುವಿನ ಬೋಧನೆ ಮತ್ತು ಮಾದರಿಗೆ ಸಂಬಂಧಿಸಿತ್ತು ಎಂಬುದರಲ್ಲಿ ಸಂಶಯವಿಲ್ಲ. ಅವರು ದೀರ್ಘಕಾಲದಿಂದ ಇರುವ ಸಂಪ್ರದಾಯಗಳಿಗೆ ವಿರುದ್ಧವಾಗಿ ಹೋಗುತ್ತಿದ್ದರಿಂದ ಅವರ ವರ್ತನೆಗಳು ವಿಚಾರವಿಲ್ಲದೆ ಅಥವಾ ಬಲಹೀನತೆಯಿಂದಾಗಿ ಮಾಡುವಂತವುಗಳಾಗಿರಲಿಲ್ಲ ಬದಲಾಗಿ ಯೇಸು ಅವರಿಗೆ ನೀಡಿದ ಬೋಧನೆಯಿಂದಾಗಿ ಬೆಳೆದು ಬಂದ ಉದ್ದೇಶ ಪೂರ್ವಕವಾದ ಕೃತ್ಯಗಳಾಗಿದ್ದವು. ಅವರು ತಾವು ಏನು ಮಾಡುತ್ತಿದ್ದರು ಅದನ್ನು ಸಿದ್ಧಾಂತಕ್ಕೆ ಅನುಗುಣವಾಗಿ ಮಾಡುತ್ತಿದ್ದರು ಅಲಕ್ಷತನದಿಂದಾಗಿ ಅಲ್ಲ. ಕನಿಷ್ಟಪಕ್ಷ ಫರಿಸಾಯರು ಮತ್ತು ಶಾಸ್ತ್ರಿಗಳು ಇದನ್ನು ತರ್ಕಿಸಬಹುದಾಗಿತ್ತು.[3]

ಫರಿಸಾಯರು ಮತ್ತು ಶಾಸ್ತ್ರಿಗಳು **ಹಿರಿಯರಿಂದ ಬಂದ ಸಂಪ್ರದಾಯವನ್ನು** ತಮ್ಮ ನ್ಯಾಯತೀರ್ಪಿನ ಅಳತೆಗಾಗಿ ಉಪಯೋಗಿಸುತ್ತಿದ್ದರು. "ಸಂಪ್ರದಾಯ" (*paradosis*) ಎನ್ನುವ ಶಬ್ದವು ಬೋಧನೆಗಳನ್ನು "ವಶಮಾಡು" ಅಥವಾ "ಮುಂದುವರಿಸು" ಎಂಬುದಕ್ಕೆ ಸೂಚಿಸುತ್ತದೆ. "ಹಿರಿಯರ ಸಂಪ್ರದಾಯಗಳು" ಸಂತತಿಯಿಂದ ಸಂತಿಯವರೆಗೆ ವಾಕ್ಯಭಾಗದ ಅರ್ಥವಿವರಣೆಯನ್ನು ಮುಂದುವರೆಸಿಕೊಂಡು ಬರುವದನ್ನು ಸೂಚಿಸುತ್ತದೆ. ತನ್ನ ಪರಿವರ್ತನೆಗೆ ಪೂರ್ವದಲ್ಲಿ, ಪೌಲನು ಫರಿಸಾಯನಾಗಿ ಬೆಳೆದಿದ್ದನು, ಮತ್ತು ಆತನು [ಆತನ] "ಪಿತೃ ಸಂಪ್ರದಾಯಗಳ" ಕುರಿತು ಶ್ರದ್ಧೆಯುಳ್ಳವನಾಗಿದ್ದನು (ಗಲಾತ್ಯ 1:14; NIV).

ಬಾಬೇಲಿನವರ ಬಂಧನದ ನಂತರ, ಯೆಹೂದ್ಯ ಬೋಧಕರು ಜನರ ಪ್ರತಿನಿತ್ಯದ ಜೀವಿತವನ್ನು ನಿಯಂತ್ರಿಸಲು ಅನೇಕ ಸೂಕ್ಷ್ಮ ನಿಯಮಗಳನ್ನು ಸ್ಥಾಪಿಸಿದರು. ಈ ನಿಯಮಗಳ ಉದ್ದೇಶ ಮುಂದೆ ಈ ನಿಯಮಗಳನ್ನು ಸ್ಪಷ್ಟಪಡಿಸುವದಾಗಿತ್ತು. ಅವು ಯೆಹೂದ್ಯರನ್ನು ಅವನತಿಗೆ ನಡೆಸಿದ ಹಿಂದಿನ ಪಾಪವನ್ನು ಪುನರಾವರ್ತಿಸದಂತೆ ಕಾಪಾಡುತ್ತಿದ್ದವು. ಅವರು "ನಿಯಮವೆಂಬ ಬೇಲಿಯ ಮಧ್ಯದಲ್ಲಿ" ಸೇವೆಯನ್ನು ಮಾಡಲು ಉದ್ದೇಶಿಸಿದ್ದರು.[4] ಕೆಲವು ಶತಮಾನಗಳಿಂದ ಮೌಖಿಕ ವಿಧದಲ್ಲಿ ಮುಂದುವರೆಸಿಕೊಂಡು ಬಂದಿದ್ದರು, ಕೊನೆಗೆ ಅವುಗಳನ್ನು Mishnahದಲ್ಲಿ ದಾಖಲಿಸಿದರು. ಸಿನಾಯಿ ಬೆಟ್ಟದಲ್ಲಿ ಮೂಲತಃ ಮೋಶೆಯು ಇವುಗಳನ್ನು ಹೊಂದಿಕೊಂಡನು ನಂತರ ಇಸ್ರಾಯೇಲರ ಹಿರಿಯರಿಂದಲೇ ಮುಂದುವರೆಸಿ ಕೊಂಡು ಬಂದವು ಎಂದು ರಬ್ಬಿಗಳು ಪ್ರತಿಪಾದಿಸುತ್ತಿದ್ದರು.[5]

ಆದರೂ ಸಹ, ಎಲ್ಲಾ ಯೆಹೂದ್ಯರು ಈ ಸಂಪ್ರದಾಯಗಳನ್ನು ಸ್ವೀಕರಿಸುತ್ತಿರಲಿಲ್ಲ. ಹೆಚ್ಚಿನ ಸಂಖ್ಯೆಯಲ್ಲಿ ಶಾಸ್ತ್ರಿಗಳು ಮತ್ತು ಫರಿಸಾಯರು ಈ ಸಂಪ್ರದಾಯಗಳನ್ನು ಲಿಖಿತ ಧರ್ಮಶಾಸ್ತ್ರದಷ್ಟೇ ಹೇರುವಂತಾಗಿದ್ದವೆಂದು ಪರಿಗಣಿಸುತ್ತಿದ್ದರು. ಹಾಗಿದ್ದರೂ ಸಹ, ಸದ್ದುಕಾಯರು, ಮತ್ತು "ಆ ದೇಶದಲ್ಲಿರುವ" ಕೆಲವು ಜನರು ತಿರಸ್ಕರಿಸದ್ದರು, ಸಾಮಾನ್ಯ ಜನರು ಅವರೊಟ್ಟಿಗೆ ಹೋಗುತ್ತಿರಲಿಲ್ಲ.[6] Josephus ರವರು ಹೀಗೆ ಬರೆದಿದ್ದಾರೆ,

> ಫರಿಸಾಯರು ತಮ್ಮ ಪಿತೃಗಳಿಂದ ಬಂದಂತ ಅನೇಕ ಆಚರಣೆಗಳನ್ನು ಜನರಿಗೆ ನೀಡಿ ದ್ದಾರೆ ಅವು ಮೋಶೆಯ ಧರ್ಮಶಾಸ್ತ್ರದಲ್ಲಿ ಬರೆಯಲ್ಪಟ್ಟಿಲ್ಲ; ಮತ್ತು ಈ ಕಾರಣದಿಂದಾಗಿ ಸದ್ದುಕಾಯುವವರು ಅವರನ್ನು ತಿರಸ್ಕರಿಸಿದ್ದಾರೆ ಮತ್ತು ನಾವು *ಲಿಖಿತ ವಾಕ್ಯವನ್ನು* ಮಾಡಲೇಬೇಕಾದವುಗಳೆಂದು ಗೌರವಿಸಬೇಕು, ಆದರೆ ನಮ್ಮ *ಪಿತೃಗಳಿಂದ ಬಂದಂತ ಸಂಪ್ರದಾಯಗಳನ್ನು* ಆಚರಿಸುವದಲ್ಲ ಎಂದು ಹೇಳುತ್ತಾರೆ; ಮತ್ತು ಈ ವಿಷಯಗಳಿಂದಾಗಿ ಅವರ ಮಧ್ಯದಲ್ಲಿ ಅನೇಕ ವಿವಾದಗಳು ಮತ್ತು ವ್ಯತ್ಯಾಸಗಳು ಹುಟ್ಟಿಕೊಂಡಿವೆ, ಅದೇ ಸಮಯದಲ್ಲಿ ಸದ್ದುಕಾಯುವವರು ಶ್ರೀಮಂತರನ್ನು ಮಾತ್ರ ಪ್ರೇರೇಪಿಸಲು ಸಮರ್ಥರಾಗಿದ್ದಾರೆ ... ಆದರೆ ಫರಿಸಾಯರ ಜನಸಮೂಹವನ್ನು ತಮ್ಮ ಕಡೆಗೆ ಮಾಡಿಕೊಂಡಿದ್ದಾರೆ.[7]

ಕೆಲವು ಸಮಯದ ನಂತರ, ಈ ಮನುಷ್ಯ ನಿರ್ಮಿತ ಸಂಪ್ರದಾಯಗಳು, ದೇವರ ವಾಕ್ಯದ

ಮೇಲೆ ಪ್ರಧಾನ್ಯತೆಯನ್ನು ಹೊಂದಲು ಪ್ರಾರಂಭಿಸುತ್ತವೆ. ಮುಂದಿನ ಮೂಲಗಳ ವರದಿಯ ಪ್ರಕಾರ ಮೌಖಿಕ ನಿಯಮಗಳು ಲಿಖಿತ ನಿಯಮಗಳ ಮೇಲೆ ಪ್ರಧಾನ್ಯತೆಯನ್ನು ಹೊಂದಿವೆ ಎಂದು ದಾಖಲಿಸುತ್ತದೆ.[8]

ಕರ್ತನ ಶಿಷ್ಯರ ವಿರುದ್ಧ ತಮ್ಮ ಆಕ್ಷೇಪಣೆಯಲ್ಲಿ ಅವರು ಉಲ್ಲಂಘಿಸಿದ್ದು ತಮ್ಮ ಮೌಖಿಕ ಸಂಪ್ರದಾಯಗಳನ್ನು ಮತ್ತು ಧರ್ಮಶಾಸ್ತ್ರದ ಲಿಖಿತ ಆಜ್ಞೆಗಳನ್ನಲ್ಲ ಎಂಬ ಮಾತನ್ನು ಶಾಸ್ತ್ರಿಗಳು ಫರಿಸಾಯರು ಅಲ್ಲಗಳೆಯಲಿಲ್ಲ. ಅವರು ಶಿಷ್ಯರನ್ನು ಊಟಮಾಡುವದಕ್ಕಿಂತ ಮೊದಲು **ಕೈ ತೊಳೆಯದೆ** ಇರುವದಕ್ಕಾಗಿ ಟೀಕಿಸಿದರು. ಅವರು ಆಕ್ಷೇಪಣೆ ವಯಕ್ತಿಕ ಸ್ವಚ್ಛತೆಯಿಂದ ಪ್ರೇರಿತವಾಗಿರಲಿಲ್ಲ. ಬದಲಾಗಿ ಅದು ಆಚರಣೆಯ ಪರಿಶುದ್ಧತೆಯ ಸಂಪ್ರದಾಯಗಳಿಂದ ಉತ್ಪತ್ತಿಯಾಗಿತ್ತು. ಕರ್ತನನ್ನು ಟೀಕಿಸುವವರ ತರ್ಕ ಕೆಳಗಿನ ವಿಧವನ್ನು ಒಳಗೊಂಡಿತ್ತು: ಆದರೆ ಊಟದ ಸಮಯದಲ್ಲಿ **ರೊಟ್ಟಿ**ಯನ್ನು ಕೈಗೆತ್ತಿಕೊಳ್ಳುವಾಗ, ಅದು ಅಶುದ್ಧವಾಗುತ್ತಿತ್ತು. ನಂತರ ಅವನು ರೊಟ್ಟಿಯನ್ನು ತಿನ್ನುವಾಗ ಅವನ ಇಡೀ ಶರೀರ ಅಶುದ್ಧಗೊಳಿಸುತ್ತಿತ್ತು. ಇಂತಹ ಆಚರಣೆಯ ಅಶುದ್ಧತೆಯನ್ನು ತಡೆಗಟ್ಟಲು ಆತನು ಊಟಮಾಡುವದಕ್ಕಿಂತ ಮೊದಲು ತನ್ನ ಕೈಗಳನ್ನು ತೊಳೆದುಕೊಳ್ಳಬೇಕು (ನೋಡಿರಿ ಮಾರ್ಕ 7:3, 4).[9]

Mishnah ದಲ್ಲಿರುವ ಸಂಪೂರ್ಣ ಪ್ರಬಂಧ *Yadaim* ("ಕೈಗಳು") ಕೈ ತೊಳೆಯುವದಕ್ಕೆ ಸಮರ್ಪಿಸಲಾಗಿದೆ, ವಿಷಯದ ಗಂಭೀರತೆಯನ್ನು ಪ್ರದರ್ಶಿಸುತ್ತದೆ. ಇದರಲ್ಲಿ ಕೈಗಳನ್ನು ಅಶುದ್ಧ ಮಾಡುವ ಸಂಗತಿಗಳನ್ನು ಚರ್ಚಿಸಲಾಗಿದೆ, ತೊಳೆಯಲು ಯಾವ ಪಾತ್ರೆಗಳನ್ನು ಉಪಯೋಗಿಸಬೇಕು, ನೀರಿನ ಶುದ್ಧತೆಯ ವಿಧ ಮತ್ತು ಅಳತೆ ಮತ್ತು ತೊಳೆಯುವ ಸರಿಯಾದ ವಿಧಾನ. ಉದಾಹರಣೆಗೆ, ಕೈಗಳನ್ನು ಬೆರಳುಗಳನ್ನು ಮೇಲೆತ್ತಿ ತೋರಿಸುವಂತೆ ಹಿಡಿದು, ನೀರು ಮುಂಗೈ ಮೇಲೆ ಹರಿದು ಹೋಗುವವರೆಗೆ ನೀರನ್ನು ಸುರಿಯಬೇಕು. ಬೆರಳುಗಳನ್ನು ಕೆಳಗಡೆಗೆ ತೋರಿಸುವಂತೆ ಹಿಡಿದು ನೀರನ್ನು ಕೈಗಳ ಮೇಲೆ ಸುರಿಯಬೇಕು.[10]

ಶಾಸ್ತ್ರಿಗಳು ಮತ್ತು ಫರಿಸಾಯರು ಇಸ್ರಾಯೇಲ್ಯರ ಯಾಜಕರಿಗೆ ನೀಡಿದ ನಿರ್ಧಿಷ್ಟವಾದ ನಿಯಮವನ್ನು ತೆಗೆದುಕೊಂಡು ಅದನ್ನು ಸಾಮಾನ್ಯ ಜನರಿಗೆ ಯೋಗ್ಯವಾಗುವಂತೆ ಅಳವಡಿಸಿದ್ದರು. ವಿಮೋಚನಕಾಂಡ 30:17-21ರ ಪ್ರಕಾರ, ಯಾಜಕರು ಯಜ್ಞಗಳನ್ನು ಸಮರ್ಪಿಸುವ ಆಚಾರದಲ್ಲಿ ತೊಡಗಿಸಿಕೊಳ್ಳುವ ಪೂರ್ವದಲ್ಲಿ ಕಂಚಿನ ಪಾತ್ರೆಯಲ್ಲಿ ಇಟ್ಟಿರುವ ನೀರಿನಿಂದ ತಮ್ಮ ಕೈ ಕಾಲುಗಳನ್ನು ತೊಳೆಯಬೇಕೆಂಬುದು ದೇವರ ಅಪೇಕ್ಷೆಯಾಗಿತ್ತು. ಸಂಪ್ರದಾಯದ ಪ್ರಕಾರ ಕೈಗಳನ್ನು ತೊಳೆಯುವದರಿಂದ, "ಸಾಮಾನ್ಯ ಜನರು ತಮ್ಮ ಪ್ರತಿನಿತ್ಯದ ಆಹಾರವನ್ನು ಯಜ್ಞವೇದಿಯ ಮೇಲೆ ದೇವರಿಗೆ ಸಮರ್ಪಿಸಿದ ಆಹಾರ ಎಂಬಂತೆ ಊಟಮಾಡಬಹುದು ಎಂದು ಫರಿಸಾಯರು ನಂಬುತ್ತಿದ್ದರು."[11] ಈ ಅಭ್ಯಾಸವು ಈ ರೀತಿಯ ಇನ್ನಿತರ ಅಭ್ಯಾಸಗಳೊಂದಿಗೆ ದೇವರ ಮುಂದೆ ಅವರ ಪರಿಶುದ್ಧತೆಯನ್ನು ಖಚಿತಪಡಿಸುತ್ತಿದ್ದರು.

**ವಚನ 3.** ಯೆಹೂದ್ಯರ ಸಂಪ್ರದಾಯಗಳು ಮೋಶೆಯ ಮೌಖಿಕ ನಿಯಮ ಮತ್ತು ಸೀನಾಯಿ ಬೆಟ್ಟದೊಂದಿಗೆ ಸಂಬಂಧ ಹೊಂದಿದಾಗ್ಯೂ, ಯೇಸು ನಿಜವಾಗಿಯೂ ಇದನ್ನು ಅಧಿಕೃತವೆಂದು ದೃಷ್ಟಿಸಲಿಲ್ಲ. ಆದಾಗ್ಯೂ ಆತನು ಕೈತೊಳೆಯುವ ಆಚರಣೆಯ ವಿಷಯದ ಕುರಿತು ಚರ್ಚಿಸಲಿಲ್ಲ. ಆತನು ತನ್ನ ಸ್ವಂತ ಆಕ್ಷೇಪಣೆಯನ್ನು ನೀಡಿದನು. ಉತ್ತಮವಾದ ರಬ್ಬಿಯರ ಶೈಲಿಯಲ್ಲಿ ಆತನು ಮತ್ತೊಂದು ಪ್ರಶ್ನೆಯನ್ನು ಕೇಳುವದರ ಮೂಲಕ ಅವರ ಪ್ರಶ್ನೆಗೆ ಉತ್ತರಿಸಿದನು: **ನೀವು ಸಹ ನಿಮ್ಮ ಸಂಪ್ರದಾಯದ ನಿಮಿತ್ತ ದೇವರ ಆಜ್ಞೆಯನ್ನು ಯಾಕೆ ಮೀರುತ್ತೀರಿ?** ಅಂದನು. "ನೀವು ನಿಮ್ಮಷ್ಟಕ್ಕೆ" ಎಂಬ ಅನುವಾದದಲ್ಲಿ ಗ್ರೀಕ್ ಪಠ್ಯದ ಖಡಾಖಂಡಿತವಾಗಿ ಹೇಳುವ ಸ್ವಭಾವವನ್ನು ತರಲಾಗಿದೆ; ಯೇಸು ಫರಿಸಾಯರ ಕಡೆಗೆ ಬೆರಳುತೋರಿಸುತ್ತಿದ್ದಾನೆ. ಶಿಷ್ಯರು ಹಿರಿಯರ ಸಂಪ್ರದಾಯಗಳನ್ನು ಮೀರುತ್ತಿರುವಾಗ, ಫರಿಸಾಯರು ದೇವರ ಆಜ್ಞೆಯನ್ನು ಮೀರುತ್ತಿದ್ದಾರೆ! ಅದಕ್ಕೂ ಹೆಚ್ಚಾಗಿ, ಅವರು ತಮ್ಮ ಮೌಖಿಕ

ಸಂಪ್ರದಾಯವನ್ನು ದೇವರ ಲಿಖಿತ ಪ್ರಕಟನೆಗಳಿಗಿಂತ ಹೆಚ್ಚು ಪ್ರಾಮುಖ್ಯವಾಗಿವೆ ಎಂಬಂತೆ ನಡೆದುಕೊಳ್ಳುತ್ತಾರೆ.

**ವಚನ 4.** ತನ್ನ ವಿಷಯಕ್ಕೆ ಇನ್ನೂ ಹೆಚ್ಚು ಒತ್ತು ನೀಡುತ್ತಾ ಯೇಸು ಶಾಸ್ತ್ರಿ ಮತ್ತು ಫರಿಸಾಯರಿಗೆ ಅವರ ಅಭ್ಯಾಸದ ಒಂದು ಉದಾಹರಣೆಯನ್ನು ಮಂಡಿಸುತ್ತಾನೆ. ಅವರು ಐದನೇ ಆಜ್ಞೆಯನ್ನು ಮೀರುತ್ತಿದ್ದಾರೆ, ಅದರಲ್ಲಿ, **ನಿಮ್ಮ ತಂದೆ ತಾಯಿಗಳನ್ನು ಸನ್ಮಾನಿಸಬೇಕೆಂತಲೂ ದೇವರು ಹೇಳಿದ್ದಾನೆ** (ವಿಮೋಚನಕಾಂಡ 20:12; ನೋಡಿರಿ ಮತ್ತಾಯ 19:19; ಎಫೆಸ 6:2). ಈ ಆಜ್ಞೆಗೆ ಯೇಸು ಇನ್ನೊಂದನ್ನು ಸೇರಿಸುತ್ತಾರೆ, ತಂದೆತಾಯಿಗಳನ್ನು ಸನ್ಮಾನಿಸದೇ ಇರುವವರಿಗೆ ಯಾವ ಶಿಕ್ಷೆ ಒಳಗೊಂಡಿದೆ: **ತಂದೆ ತಾಯಿಯನ್ನಾಗಲಿ ದೂಷಿಸುವವನಿಗೆ ಮರಣದಂಡಗೆ ಆಗಬೇಕೆಂದು ದೇವರು ಹೇಳಿದ್ದಾನೆ ಅಂದನು** (ವಿಮೋಚನಕಾಂಡ 21:17; ಯಾಜಕಕಾಂಡ 20:9).

"ಸನ್ಮಾನಿಸು" ಎಂಬ ಶಬ್ದದಲ್ಲಿರುವ ಎಲ್ಲಾ ವಿವರಗಳನ್ನು ನಿರ್ಧಿಷ್ಟಪಡಿಸುವದಿಲ್ಲ. ಏನೇ ಆದರೂ, ಇದು ನಿಜವಾಗಿ ಹಣಕಾಸಿನ ಬೆಂಬಲವನ್ನು ಒಳಗೊಂಡಿದೆ (ನೋಡಿರಿ 1 ತಿಮೊಥೆ 5:4). ಕ್ರಿಸ್ತನ ಸಮಯದಲ್ಲಿ ಯಾವುದೇ ಸಾಮಾಜಿಕ ಪದ್ಧತಿ ಯೆಹೂದ್ಯರ ಮಧ್ಯದಲ್ಲಿ ಅಸ್ತಿತ್ವದಲ್ಲಿರಲಿಲ್ಲ. ಬಹಳ ಮುದುಕರಾಗುವಾಗ ಮತ್ತು ತಮ್ಮಷ್ಟಕ್ಕೆ ತಾವೇ ಒದಗಿಸಿಕೊಳ್ಳಲು ಸಾಧ್ಯವಿಲ್ಲದೇ ಇರುವಾಗ ಮಕ್ಕಳು ತಮ್ಮ ತಂದೆತಾಯಿಗಳಿಗೆ ಒದಗಿಸಬೇಕು. ಒಬ್ಬ ಮಗನು ತನ್ನ ತಂದೆಗೆ ಆಹಾರವನ್ನು ಮತ್ತು ಪಾನೀಯಗಳನ್ನು, ವಸ್ತ್ರಗಳನ್ನು ನೀಡುವದು, ಹೊದಿಸುವದು, ಆತನು ಹೊರಗೆ ಒಳಗೆ ಹೋಗುವಾಗ ಜೊತೆಯಾಗಿರುವದು, ಆತನ ಮುಖ, ಕೈ ಮತ್ತು ಕಾಲುಗಳನ್ನು ತೊಳೆಯುವದಕ್ಕೆ ಬದ್ಧನಾಗಿದ್ದಾನೆಂದು ಯೆಹೂದ್ಯರ ಸಂಪ್ರದಾಯ ಹೇಳುತ್ತದೆ.[12] ಒಬ್ಬ ಮಗನು ತನ್ನ ತಂದೆಗೆ ಬೆಂಬಲಿಸಲು ಭಿಕ್ಷೆಬೇಡಬೇಕಾಗಿ ಬಂದರು ಅವನು ಅದಕ್ಕೆ ಬದ್ಧನಾಗಿರಬೇಕು ಎಂದು ಇನ್ನೊಂದು ಸಂಪ್ರದಾಯ ಹೇಳುತ್ತದೆ.[13] ವಚನ 5 ಮತ್ತು 6ರಲ್ಲಿ, ಕರ್ತನು, "ನಿನ್ನ ತಂದೆ ತಾಯಿಗಳನ್ನು ಸನ್ಮಾನಿಸು" ಎಂಬ ಈ ಆಜ್ಞೆಯನ್ನು ಸ್ಪಷ್ಟವಾಗಿ ವ್ಯಾಖ್ಯಾನಿಸುತ್ತಾನೆ ಕೇವಲ ಪ್ರೀತಿಸುವದು ಮತ್ತು ಗೌರವಿಸುವದು ಮಾತ್ರವಲ್ಲ ಅವಶ್ಯವಿದ್ದಲ್ಲಿ ಹಣಕಾಸಿನ ಸಹಾಯವನ್ನು ಸಹ ಮಾಡಬೇಕು.

**ವಚನಗಳು 5, 6.** ಆದರೆ **ಅನ್ನುತ್ತೀರಿ** ಎನ್ನುವ ವಾಕ್ಯಭಾಗವು ವಚನ 4ರಲ್ಲಿ "ದೇವರು ಹೇಳಿದ್ದಾನೆ" ಎಂಬುವದಕ್ಕೆ ವಿರುದ್ಧವಾಗಿದೆ. ಈ ಶಬ್ದಗಳ ಮೂಲಕ ಯೇಸು ಫರಿಸಾಯರನ್ನು ದೇವರ ನೇರವಾದ ವಿರೋಧಿಗಳಾಗಿ ಇಟ್ಟಿದ್ದಾನೆ. ದೇವರು "ನಿಮ್ಮ ತಂದೆ ಮತ್ತು ತಾಯಿಯನ್ನು ಸನ್ಮಾನಿಸು" ಎಂದು ಆಜ್ಞೆಮಾಡಿರುವಾಗ ಫರಿಸಾಯರು ತಮ್ಮ ಹರಕೆಗಳ ಕುರಿತಾದ ತೀರ್ಮಾನಗಳಲ್ಲಿ ಅವರು **ಆತನು ತನ್ನ ತಂದೆ ಅಥವಾ ತನ್ನ ತಾಯಿಯನ್ನು ಸನ್ಮಾನಿಸು*ವವನಲ್ಲ*** ಎಂಬ ನಿಯಮವನ್ನು ಮಾಡಿಕೊಂಡಿದ್ದಾರೆ (ಒತ್ತಿ ಹೇಳಿದ್ದು ನನ್ನದು).

ತಮ್ಮ ತಂದೆ ತಾಯಿಗಳಿಗೆ ಸಹಾಯ ಮಾಡುವ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು, ಒಬ್ಬ ಅವಿಧೇಯ ಯೆಹೂದ್ಯನು **ನಾನು ನಿನ್ನ ಸಂರಕ್ಷಣೆಗಾಗಿ ಕೊಡತಕ್ಕದ್ದನ್ನು ದೇವರಿಗಾಗಿ ಇಟ್ಟಿದ್ದೇನೆ** ಎಂದು ಪ್ರತಿಜ್ಞೆ ಮಾಡುತ್ತಾನೆ. ಗ್ರೀಕ್ ಪಠ್ಯದಲ್ಲಿ "ಕಾಣಿಕೆ" (*dōron*), ಎಂಬ ನಾಮಪದ ಇದೆ, ಈ ಪದವು ಕೆಲವೊಮ್ಮೆ ತ್ಯಾಗದ ಕಾಣಿಕೆ ಮತ್ತು ದೇವಾಲಯದಲ್ಲಿ ಅರ್ಪಿಸಿದ ಕಾಣಿಕೆಗಳು ಎಂದು ಸೂಚಿಸುತ್ತದೆ (5:23, 24; 8:4; 23:18, 19; ಲೂಕ 21:1, 4). ಮಾರ್ಕನ ಸುವಾರ್ತೆಯಲ್ಲಿ *dōron* ಇದರೊಂದಿಗೆ "ಕೊರ್ಬಾನ್" (*korban*) ಸಹ ಉಪಯೋಗಮಾಡಲಾಗಿದೆ (ಮಾರ್ಕ 7:11). ತಾಂತ್ರಿಕ ಪದವನ್ನು ಇಬ್ರಿಯ ಭಾಷೆಯಿಂದ ಗ್ರೀಕ್ (ನಂತರ ಇಂಗ್ಲೀಷ್ ಭಾಷೆಗೆ) ಅನುವಾದಿಸಲಾಗಿದೆ, ದೇವರ ಕಾಣಿಕೆ ನೀಡುತ್ತೇನೆಂದು ಪ್ರತಿಜ್ಞೆಮಾಡಿದ ಯಾವುದನ್ನಾದರೂ ಸೂಚಿಸುತ್ತದೆ. ಇದಕ್ಕೆ ಸಂಬಂಧಿಸಿದ ನಾಮಪದ *korbanas* ಇದನ್ನು "ದೇವಾಲಯದ ಖಜಾನೆಗೆ" ಉಪಯೋಗಿಸಲಾಗಿದೆ (27:6).

ಯೆಹೂದ್ಯರು ಕೆಲವೊಂದು ಆಸ್ತಿಯನ್ನು "ಕೊರ್ಬಾನ್" ಎಂದು ಗುರುತಿಸುತ್ತಿದ್ದರು.

ಆದರೂ, ವಸ್ತುಗಳನ್ನು ಯಾವಾಗಲೂ ದೇವಾಲಯದ ಖಜಾನೆಗೆ ಕೊಡುತ್ತಿರಲಿಲ್ಲ - ಕೊನೆ ಪಕ್ಷ ಮಾಲೀಕನ ಜೀವಿತದ ಅವಧಿಯಲ್ಲಿ ಒಂದು ಸಾರಿ ಕೊಡುತ್ತಿದ್ದರು. ಇಂಥಹ ಪ್ರತಿಜ್ಞೆಗಳು, ತಮ್ಮ ಸ್ವಂತ ತಂದೆತಾಯಿಗಳಿಗೆ ಬೆಂಬಲಿಸಲು ಸಹ, ಸಾಮಾಜಿಕ ಉದ್ದೇಶಗಳಿಗಾಗಿ ಉಪಯೋಗಿಸುವದನ್ನು ನಿರ್ಭಂದಿಸಿದ್ದವು. ಪ್ರಸ್ತುತ ಸ್ಥಿತಿಯಲ್ಲಿ ಒಬ್ಬನು (ಬಹುಶಃ ಸಿಟ್ಟಿನಲ್ಲಿ) ತನ್ನ ವಯಸ್ಸಾಗಿರುವ ತಂದೆ ತಾಯಿಗಳಿಗಾಗಿ ಉಪಯೋಗಿಸುವ ಉದ್ದೇಶ ಹೊಂದಿದ್ದು ಅದನ್ನೇ ಉದ್ದೇಶ ಪೂರ್ವಕವಾಗಿ ದೇವರಿಗೆ ಸಮರ್ಪಿಸುವದಾಗಿದೆ. Mishnah ತನ್ನ ತಂದೆ ತನ್ನಿಂದ ಯಾವುದೇ ಸಹಾಯವನ್ನು ಹೊಂದುವದನ್ನು ನಿಷೇದಿಸಿ ಪ್ರತಿಜ್ಞೆಯನ್ನು ಮಾಡಿದ ಮನುಷ್ಯನ ಉದಾಹರಣೆಯನ್ನು ನೀಡುತ್ತದೆ.[14]

ಪ್ರತಿಜ್ಞೆಗಳು ಬಂಧಕಗಳಾಗಿರುವದರಿಂದ (ಅರಣ್ಯಕಾಂಡ 30:2; ಧರ್ಮೋಪದೇಶ ಕಾಂಡ 23:21-23), ಅಗತ್ಯತೆಯಿರುವ ತಮ್ಮ ತಂದೆತಾಯಿಗಳಿಗೆ ಸಹಾಯ ಮಾಡಲು (ಇದನ್ನು ದೇವರು ಆಜ್ಞಾಪಿಸಿದ್ದಾನೆ) ಪ್ರತಿಜ್ಞೆಗಳನ್ನು ಮುರಿದವರನ್ನು ಫರಿಸಾಯರು ಅವು ಗಂಭೀರ ಸ್ವರೂಪದ ಪಾಪಗಳು[15] ಎಂದು ಆಕ್ಷೇಪಿಸುತ್ತಿದ್ದರು (ಅದು ಮನುಷ್ಯರು ಮಾಡಿದ ಸಂಪ್ರದಾಯ ಪ್ರತಿಜ್ಞೆಗಳು). ಸಮಯ ಕಳೆದಂತೆ ಈ ವಿಷಯದ ಕುರಿತಾದ ಆಲೋಚನೆಗಳಲ್ಲಿ ಬದಲಾವಣೆ ಬಂತು. Mishnah[16] ಒಂದು ವೇಳೆ *korban* ಪ್ರತಿಜ್ಞೆ ತಂದೆ ತಾಯಿಗಳಿಗಾಗಿರುವ ಕರ್ತವ್ಯದೊಂದಿಗೆ ಘರ್ಷಣೆಯಾದಲ್ಲಿ ಪ್ರತಿಜ್ಞೆಯನ್ನು ರದ್ದುಮಾಡಬೇಕು[17] ಎಂದು ಸೂಚಿಸುತ್ತದೆ.

ಅವರ **ಸಂಪ್ರದಾಯಕ್ಕನುಗುಣವಾಗಿ,** ಫರಿಸಾಯರು **ದೇವರ ವಾಕ್ಯವನ್ನು ನಿರರ್ಥಕ ಮಾಡಿದ್ದಾರೆ** ಎಂದು ಯೇಸು ಹೇಳಿದನು. "ನಿರರ್ಥಕ" (*akuroō*) ಇದು ಅಧಿಕೃತವಾದ ಪದವಾಗಿದೆ, ಇದರ ಅರ್ಥವೇನೆಂದರೆ "ಶೂನ್ಯವಾಗಿ ಮಾಡು" ಈ ವಿಧದಲ್ಲಿ AB ವ್ಯಾಖ್ಯೆ ಯೇಸುವಿನ ಮಾತನ್ನು ಹೀಗೆ ವಿವರಿಸುತ್ತದೆ: "ನೀವು ದೇವರ ವಾಕ್ಯವನ್ನು ಬದಿಗಿಟ್ಟಿದ್ದೀರಿ - ಅದನ್ನು ಒತ್ತಡ ಮತ್ತು ಅಧಿಕಾರದಿಂದ ಕಿತ್ತುಕೊಂಡು ಅದು ಪರಿಣಾಮ ಬೀರದಂತೆ ಮಾಡಿದ್ದೀರಿ."

**ವಚನ 7.** ಯೇಸು ಈ ಯೆಹೂದ್ಯ ನಾಯಕರನ್ನು **ಕಪಟಿಗಳು** ಎಂದು ಕರೆದನು (6:2, 5ರ ಮೇಲಿನ ವ್ಯಾಖ್ಯಾನ ನೋಡಿರಿ). ಅವರು ದೇವರ ನಿಯಮವನ್ನು ಎತ್ತಿಹಿಡಿಯುವವರಂತೆ ನಟಿಸಿದರು ಆದರೆ ನೈಜ್ಯತೆಯಲ್ಲಿ ಅವರು ಅದರ ವಿರೋಧಿಸುತ್ತಿದ್ದರು. ಅವರು ಮೂಲತಃ ದೇವರಿಗೆ ಮಹಿಮೆ ತರುವ ಉದ್ದೇಶ ಹೊಂದಿರುವ ಪ್ರತಿಜ್ಞೆಯ ಕಟ್ಟುಗಳ ಸ್ವರೂಪವನ್ನು ಬೆಂಬಲಿಸುತ್ತಿದ್ದರು. ಏನೇ ಆದರೂ, ತನ್ನ ಸ್ವಂತ ತಂದೆ ತಾಯಿಗಳಿಗೆ ಸಹಾಯ ಮಾಡುವದನ್ನು ಅಲ್ಲಗಳೆಯುವ ಪ್ರತಿಜ್ಞೆಗಳು ಸ್ವಾರ್ಥ ಆಸಕ್ತಿಯಿಂದ ಮಾಡಿದಂತವುಗಳಾಗಿದ್ದವು. ಇಂತಹ ಪ್ರತಿಜ್ಞೆಗಳನ್ನು ಎತ್ತಿಹಿಡಿಯುವದರಿಂದ, ಫರಿಸಾಯರು ದೇವರನ್ನು ಮತ್ತು ಆತನ ನಿಯಮಗಳನ್ನು ಗೌರವಿಸುತ್ತಿರಲಿಲ್ಲ.

ಯೇಸು ತನ್ನ ಪ್ರತ್ಯುತ್ತರವನ್ನು ಯೆಶಾಯ 29:13ರ ಒಂದು ಉಲ್ಲೇಖದೊಂದಿಗೆ ಮುಕ್ತಾಯಗೊಳಿಸುತ್ತಾನೆ. ಈ ಉಲ್ಲೇಖದ ಪೀಠಿಕೆ ಅಘಾತವನ್ನುಂಟುಮಾಡುವ ಗದರಿಕೆಯಿಂದ ಕೂಡಿದೆ: **ನಿಮ್ಮ ವಿಷಯದಲ್ಲಿ ಯೆಶಾಯನು ವಿಹಿತವಾಗಿ ಪ್ರವಾದಿಸಿದ್ದಾನೆ.** ಪ್ರವಾದಿಯೂ ತನ್ನ ದಿನಗಳಲ್ಲಿ ಇಸ್ರಾಯೇಲ್ಯರನ್ನು ಮೊದಲನೆಯ ಬಾರಿಗೆ ಸಂಬೋಧಿಸಿದಾಗ, ಯೇಸು ಸೂಚಿಸುವಂತೆ ಅವನ ಪ್ರೇರಾಣತ್ಮಕ ಪದಗಳು ಮೊದಲನೇ ಶತಮಾನದ ಯೆಹೂದ್ಯರಿಗೆ ಅನ್ವಯವಾಗುವಂತಿದ್ದವು (ನೋಡಿರಿ ಅಪೊಸ್ತಲರ ಕೃತ್ಯಗಳು 28:25-27). "ಇತಿಹಾಸ ಇನ್ನೊಂದು ರೀತಿಯಲ್ಲಿ ಹೇಳಬೇಕಾದರೆ ತನ್ನಷ್ಟಕ್ಕೆ ಪುನರಾವರ್ತಿಸುತ್ತದೆ"[18] ಎಂದು William Hendriksen ರವರು ವ್ಯಾಖ್ಯಾನಿಸಿದ್ದಾರೆ.

**ವಚನ 8. ಈ ಜನರು ಮಾತಿನಿಂದ ನನ್ನನ್ನು ಸನ್ಮಾನಿಸುತ್ತಾರೆ, ಆದರೆ ಅವರ ಮನಸ್ಸು ನನಗೆ ದೂರವಾಗಿದೆ.** ಯೇಸು ಹಳೆ ಒಡಂಬಡಿಕೆಯ ವಾಕ್ಯಭಾಗವನ್ನು ಉಪಯೋಗಿ

ಸುತ್ತಿರುವ ಹಾಗೆ, ಅವನು "ಗೌರವ" ಎಂಬ ಹಂಚಿಕೊಂಡ ಪದದ ಮೂಲಕ ಈ ಸಂಗತಿಯೊಂದಿಗೆ ಹೊಂದಿಸುತ್ತಾನೆ. ಅವನ ಶಿಷ್ಯರು ಸಂಪ್ರದಾಯಗಳನ್ನು ಗೌರವಿಸುವದಿಲ್ಲ ಎಂಬ ಆಕ್ಷೇಪಣೆ ಇತ್ತು. ಯೇಸು ಅವರನ್ನು ತಂದೆತಾಯಿಗಳನ್ನು ಸನ್ಮಾನಿಸಲ್ಪಡಬೇಕೆಂಬ ಆಜ್ಞೆಯ ಕಡೆಗೆ ಕೊಂಡ್ಯೊದನು. ತಮ್ಮ ಮಕ್ಕಳಿಂದ ತಂದೆತಾಯಿಗಳು ಸನ್ಮಾನಿಸಲ್ಪಡ ಬೇಕೆಂದು ದೇವರು ಆಜ್ಞೆಯನ್ನು ನೀಡಿದ್ದಾನೆ. ಫರಿಸಾಯರು ಮತ್ತು ಶಾಸ್ತ್ರಿಗಳು ತಮ್ಮ ಸಂಪ್ರದಾಯಗಳನ್ನು ಗೌರವಿಸಿದ್ದರು ಆದರೆ ತಮ್ಮ ತಂದೆ ತಾಯಿಗಳನ್ನು ಸನ್ಮಾನಿಸುವಂತೆ ನಟಿಸುತ್ತಿದ್ದರು (ನೋಡಿರಿ 15:4).[19] ನಿಜವಾದ ಧರ್ಮವು ಎಲ್ಲದಕ್ಕಿಂತಲೂ ಹೆಚ್ಚಾಗಿ ದೇವರನ್ನು ಪ್ರೀತಿಸುವ ಯಥಾರ್ಥವಾದ ಹೃದಯದಿಂದ ಹುಟ್ಟುತ್ತದೆ (ಧರ್ಮೋಪದೇಶಕಾಂಡ 6:5; ಮತ್ತಾಯ 22:37, 38).

**ವಚನ 9. ಮನುಷ್ಯರು ಕಲ್ಪಿಸಿದ ಕಟ್ಟಳೆಗಳನ್ನೇ ಅವರು ಬೋಧಿಸುವದರಿಂದ ನನಗೆ ಭಕ್ತಿ ತೋರಿಸುವದು ವ್ಯರ್ಥ ಎಂಬುದೆ.** "ವ್ಯರ್ಥ" (*matēn*) ಇದರ ಅರ್ಥ "ನಿರರ್ಥಕ" ಅಥವಾ "ಕೊನೆಯಿಲ್ಲದ." ವಿಗ್ರಹಾರಾಧನೆಯನ್ನು ಇದೇ ರೀತಿಯ ಭಾಷೆಯಲ್ಲಿ ಬಣ್ಣಿಸಿದ್ದಾರೆ ("ವ್ಯರ್ಥ ಕಾರ್ಯಗಳು", ಅಪೊಸ್ತಲರ ಕೃತ್ಯಗಳು 14:15). ಇದರೊಟ್ಟಿಗೆ ತಮ್ಮ ನಾಲಿಗೆಯನ್ನು ಹತೋಟಿಯಲ್ಲಿಟ್ಟುಕೊಳ್ಳದೇ ಇರುವ ಕ್ರೈಸ್ತರ ಧರ್ಮವನ್ನು "ನಿಷ್ಪ್ರಯೋಜಕ" ಎಂದು ವರ್ಣಿಸಿದ್ದಾರೆ (ಯಾಕೋಬ 1:26).

ಈ ವಚನದ ಭಾಷೆಯು ದೇವರು ತನಗೆ ಸಲ್ಲಿಸುವ ಯಾವುದೇ ವಿಧದ ಆರಾಧನೆಯನ್ನು ಸ್ವೀಕರಿಸುತ್ತಾನೆ ಎಂಬ ಆಧುನಿಕ ತಪ್ಪು ತಿಳುವಳಿಕೆಯನ್ನು ಬಹಿರಂಗಪಡಿಸುತ್ತದೆ. ಪ್ರಾರಂಭದಿಂದ ಆತನು ತನ್ನ ಜನರು ತನ್ನ ನಿಯಮಗಳಿಗೆ ಅನುಸಾರವಾಗಿ ಯಥಾರ್ಥ ಹೃದಯದಿಂದ ಆರಾಧಿಸುವದನ್ನು ಬಯಸುತ್ತಾನೆ (ಆದಿಕಾಂಡ 4:1-8).

ಈ ವಿಷಯದಲ್ಲಿ, ಯೇಸು ಶಾಸ್ತ್ರಿಗಳನ್ನು ಮತ್ತು ಫರಿಸಾಯರನ್ನು ದೇವರ ನಿಯಮಗಳಿಗೆ ಬದಲಾಗಿ ಮಾನವ ನಿರ್ಮಿತ ಸಂಪ್ರದಾಯಗಳನ್ನು ಇಡುತ್ತಿರುವದಕ್ಕಾಗಿ ದಂಡಿಸುತ್ತಿದ್ದಾನೆ. ಅವರ ಧಾರ್ಮಿಕ ನಿಷ್ಪ್ರಯೋಜಕತೆ ನಿಶ್ಚಯವಾಗಿಯೂ ಸಾಮಾನ್ಯ ಜನರಿಗೆ ಅವರು ಏನನ್ನು ಅಭ್ಯಾಸ ಮಾಡಲು ಬೋಧಿಸುತ್ತಾರೋ ಅದರಿಂದಲೇ ಆಗಿದೆ. ಗ್ರೀಕ್‌ನಲ್ಲಿ "ಸಿದ್ಧಾಂತಗಳಂತೆ ಬೋಧಿಸುವದು" (*didaskontes didaskalias*) ಪುನರಾವರ್ತನೆಯನ್ನು ಒಳಗೊಂಡಿದೆ ಮತ್ತು ವಾಸ್ತವವಾಗಿ ಇದನ್ನು "ಬೋಧನೆಗಳನ್ನು ಬೋಧಿಸುವದು" ಎಂದು ಅನುವಾದಿಸಬಹುದು. ಅದೇ ಸಮಯದಲ್ಲಿ ಸಂಪ್ರದಾಯಗಳು ನಿಯಮಗಳಾಗುವ ಮತ್ತು ದೇವರ ನಿಯಮಗಳಿಗೆ ಅಡತಡೆಯಾಗುವ ಪ್ರವೃತ್ತಿಯನ್ನು ಹೊಂದಿರುತ್ತವೆ, ಎಲ್ಲಾ ಸಂಪ್ರದಾಯಗಳು ಕೆಟ್ಟವುಗಳಲ್ಲ.

ಈ ಉಪಕಥೆಯಲ್ಲಿ, ಯೇಸು ಎಲ್ಲಾ ಸಂಪ್ರದಾಯಗಳನ್ನು ಖಂಡಿಸುತ್ತಿಲ್ಲ. ಅವನು ದೇವಾಲಯದ ಆರಾಧನೆಗೆ ಹೋಗುವ, ಊಟಮಾಡುವದಕ್ಕೆ ಪೂರ್ವದಲ್ಲಿ ಪ್ರಾರ್ಥನೆ ಮಾಡುವ ಮತ್ತು ಸ್ತುತಿ ಕೀರ್ತನೆಗಳನ್ನು ಪಸ್ಕಭೋಜನದ ಸಮಯದಲ್ಲಿ ಕೀರ್ತನೆ (113-118) ಹಾಡುವ ಸಂಪ್ರದಾಯವನ್ನು ಅನುಸರಿಸುತ್ತಿದ್ದನು. ಆತನು ಹಾಗಿದ್ದರೂ, ಸಂಪ್ರದಾಯಗಳನ್ನು ನಿಯಮಗಳ ಕಟ್ಟುಗಳನ್ನಾಗಿ ಮಾಡುವದನ್ನು ಮತ್ತು ಅವುಗಳನ್ನು ದೇವರ ನಿಯಮಗಳಿಗೆ ಸರಿಸಮಾನವಾಗಿ ಇಡುವದನ್ನು ಖಂಡಿಸುತ್ತಿದ್ದನು.[20]

## ನಿಜವಾದ ಮಲೀನತೆ (15:10-20)

**10ಆ ಮೇಲೆ ಯೇಸು ಜನರ ಗುಂಪನ್ನು ಹತ್ತರಕ್ಕೆ ಕರೆದು ಅವರಿಗೆ - ಕಿವಿಗೊಟ್ಟು ಕೇಳಿರಿ, ತಿಳುಕೊಳ್ಳಿರಿ. 11ಬಾಯೊಳಕ್ಕೆ ಹೋಗುವಂಥದು ಮನುಷ್ಯನನ್ನು ಹೊಲೆಮಾಡುವದಿಲ್ಲ; ಬಾಯೊಳಗಿಂದ ಹೊರಡುವಂಥದೇ ಮನುಷ್ಯನನ್ನು ಹೊಲೆಮಾಡುವದು ಎಂದು ಹೇಳಿದನು.**

**[12]ಆಗ ಶಿಷ್ಯರು ಬಂದು ಆತನನ್ನು - ಫರಿಸಾಯರು ಈ ಮಾತನ್ನು ಕೇಳಿ ಬೇಸರ
ಗೊಂಡರೆಂದು ನಿನಗೆ ಗೊತ್ತಾಯಿತೋ ಎಂದು ಕೇಳಿದರು. [13]ಅದಕ್ಕೆ ಆತನು -
ಪರಲೋಕದಲ್ಲಿರುವ ನನ್ನ ತಂದೆಯು ನೆಡದೆ ಇರುವ ಗಿಡಗಳೆಲ್ಲಾ ಬೇರಿನೊಂದಿಗೆ ಕಿತ್ತು
ಹಾಕಲ್ಪಡುವವು. [14]ಅವರ ಮಾತನ್ನು ಬಿಡಿರಿ; ತಾವೇ ಕುರುಡರು, ಮತ್ತೊಬ್ಬರಿಗೆ ದಾರಿತೋರಿ
ಸುವದಕ್ಕೆ ಹೋಗುತ್ತಾರೆ; ಕುರುಡನು ಕುರುಡನಿಗೆ ದಾರಿ ತೋರಿಸಿದರೆ ಅವರಿಬ್ಬರೂ
ಕುಣಿಯಲ್ಲಿ ಬೀಳುವರು ಅಂದನು. [15]ಆಗ ಪೇತ್ರನು ಈ ಸಾಮ್ಯದ ಅರ್ಥವನ್ನು ನಮಗೆ
ಹೇಳು ಅನ್ನಲು ಆತನು - [16]ನಿಮಗೂ ಇನ್ನು ಬುದ್ಧಿ ಇಲ್ಲವೇ? [17]ಬಾಯೊಳಕ್ಕೆ ಹೋಗುವಂಥದು
ಹೊಟ್ಟೆಯಲ್ಲಿ ಸೇರಿ ಬಹಿರ್ದೇಶಕ್ಕೆ ಹೋಗುತ್ತದೆಂದು ನಿಮಗೆ ತಿಳಿಯಲಿಲ್ಲವೋ [18]ಆದರೆ
ಬಾಯೊಳಗಿಂದ ಹೊರಡುವಂಥವುಗಳು ಮನಸ್ಸಿನೊಳಗಿಂದ ಬರುತ್ತವೆ; ಇವೇ ಮನುಷ್ಯನನ್ನು
ಹೊಲೆಮಾಡುವವು, [19]ಹೇಗೆಂದರೆ ಮನಸ್ಸಿನೊಳಗಿಂದ ಕೆಟ್ಟ ಆಲೋಚನೆ, ಕೊಲೆ ಹಾದರ
ಸೂಳೆಗಾರಿಕೆ, ಕಳ್ಳತನ, ಸುಳ್ಳುಸಾಕ್ಷಿ, ಬೈಗಳು, ಹೊರಟು ಬರುತ್ತವೆ. [20]ಮನುಷ್ಯನನ್ನು
ಕೆಡಿಸುವಂಥವುಗಳು ಇವೇ; ಆದರೆ ಕೈ ತೊಳಕೊಳ್ಳದೆ ಊಟಮಾಡುವದು ಮನುಷ್ಯನನ್ನು
ಕೆಡಿಸುವದಿಲ್ಲ ಅಂದನು.**

ಮತ್ತಾಯನ ಸುವಾರ್ತೆಯ ಈ ಭಾಗವು ಮುಂದುವರಿದಂತೆಯೇ (15:1-20), ಯೇಸುವಿನ ಶ್ರೋತೃಗಳು ಬದಲಾಗುತ್ತಿರುತ್ತಾರೆ. ಮೊದಲು ಅವನು ಯೆಹೂದ್ಯ ನಾಯಕರೊಂದಿಗೆ ಮಾನವ ನಿರ್ಮಿತ ಸಂಪ್ರದಾಯಗಳ ಕುರಿತು ವಾದಿಸುತ್ತಾನೆ (15:1-9). ನಂತರ ಆತನು ಜನಸಮೂಹದೊಂದಿಗೆ ಆತ್ಮೀಕ ಮಲೀನತೆಯ ಕುರಿತಾಗಿ ಮಾತನಾಡುತ್ತಾನೆ (15:10, 11), ಅಂತಿಮವಾಗಿ, ಅವನು ತನ್ನ ವ್ಯಾಖ್ಯಾನವನ್ನು ತನ್ನ ಶಿಷ್ಯರಿಗೆ ಹೆಚ್ಚು ವಿವರವಾಗಿ ವಿವರಿಸಿದನು (15:12-20).

**ವಚನ 10. ಯೇಸುವನ್ನು** ಸುತ್ತುವರೆದಿರುವ **ಜನಸಮೂಹದಲ್ಲಿ** ಅನೇಕರು 14:34-36 ರಲ್ಲಿ ಸೂಚಿಸಿದವರಾಗಿರಬಹುದು. ಅವರು ಆತನ ಅದ್ಭುತಗಳನ್ನು ನೋಡಿದವರು ಅಥವಾ ತಮ್ಮ ಪ್ರೀತಿ ಪಾತ್ರರನ್ನು ಸ್ವಸ್ಥತೆಗಾಗಿ ಆತನ ಬಳಿಗೆ ತಂದವರು ಆಗಿದ್ದರು. ಅವರು ಖಂಡಿತವಾಗಿ ಆತನ ಸಮೀಪದಲ್ಲಿ ನಿಂತು ಯೇಸು ಮತ್ತು ಯೆಹೂದಿ ನಾಯಕರ ನಡುವೆ ನಡೆಯುತ್ತಿರುವ ವಾದವಿವಾದವನ್ನು ವೀಕ್ಷಿಸುತ್ತಿರಬಹುದು. ಆತನು ಅವರನ್ನು ಈಗ ತಾನೇ ಆ ನಾಯಕರಿಗೆ ಹೇಳಿದ ವಿಷಯವನ್ನು ಸವಿಸ್ತಾರವಾಗಿ ಹೇಳುವದಕ್ಕಾಗಿ ತನ್ನ ಸಮೀಪಕ್ಕೆ **ಕರೆದನು.** ಯೇಸು ಕೇವಲ ವಿಸ್ತಾರವಾದ ಅವರ ಸಂಪ್ರದಾಯದ ಕುರಿತು ಅವರಿಗಿರುವ ಪ್ರಶ್ನೆಗೆ ಮಾತ್ರ ಉತ್ತರಿಸಿದನು (15:2). ಈ ಸನ್ನಿವೇಶದಲ್ಲಿ, ಆತನು ಹೆಚ್ಚು ನಿರ್ಧಿಷ್ಟವಾಗಿ ಕೈ ತೊಳೆಯುವ ಸಂಪ್ರದಾಯವನ್ನು ಮಾತ್ರ ನಿರ್ವಹಿಸಿದನು (15:2).

ಕಿವಿಗೊಟ್ಟು **ಕೇಳಿರಿ, ತಿಳುಕೊಳ್ಳಿರಿ** ಎಂಬ ಪದಪ್ರಯೋಗ "ನಾನು ಹೇಳುವದನ್ನು ಕಿವಿಗೊಟ್ಟು ಕೇಳಿರಿ" ಎಂದು ಯೇಸು ಹೇಳುವ ವಿಧಾನವಾಗಿತ್ತು (ನೋಡಿರಿ 11:15; 13:9, 43). ಊಟ ಮಾಡುವ ಮೊದಲು ಕೈ ತೊಳೆಯುವ ಆಚರಣೆ ಸಮಯಕ್ಕೆ ಅನುಗುಣವಾದ ಸಂಪ್ರದಾಯವನ್ನು ಆತನ ಮಾತುಗಳು ಸ್ಪಷ್ಟವಾಗಿ ವಿರೋಧಿಸಿದವು, ಇದನ್ನು ಅರ್ಥಮಾಡಿಕೊಳ್ಳುವದಕ್ಕೆ ಅಥವಾ ಆತನು ಬೋಧಿಸುವದನ್ನು ಸ್ವೀಕರಿಸುವದಕ್ಕೆ ಅನೇಕರಿಗೆ ಕಠಿಣವಾಯಿತು.

**ವಚನ 11. ಬಾಯೊಳಕ್ಕೆ ಹೋಗುವಂಥದ್ದು ಮನುಷ್ಯನನ್ನು ಹೊಲೆ ಮಾಡುವದಿಲ್ಲ; ಬಾಯೊಳಗಿಂದ ಹೊರಡುವಂಥದೇ ಮನುಷ್ಯನನ್ನು ಹೊಲೆಮಾಡುವದು** ಎಂದು ಯೇಸು ಹೇಳಿದನು. ಈ "ಸಾಮ್ಯದಿಂದ" (15:15), ಕರ್ತನು ಒಬ್ಬ ವ್ಯಕ್ತಿಯು ದೇವರ ದೃಷ್ಟಿಯಲ್ಲಿ ಹೇಗೆ ಅಶುದ್ಧನಾಗುತ್ತಾನೆ ಎಂಬುದನ್ನು ವಿವರಿಸಿದನು. ಆತನು *ಆಚರಣೆಯಲ್ಲಿ* ಅಶುದ್ಧವೆಂದು ಒತ್ತು ನೀಡುವ ಶಾಸ್ತ್ರಿಗಳ ಮತ್ತು ಫರಿಸಾಯರ ಸಾಂಪ್ರದಾಯಿಕ ಸ್ಥಾನವನ್ನು ಅಲ್ಲಗಳೆದನು.

ಮನುಷ್ಯನು ಬಾಯಿಯೊಳಗೆ ಹಾಕಿಕೊಳ್ಳುವ ಯಾವುದು ಆತನನ್ನು *ಆತ್ಮೀಕವಾಗಿ* ಅಶುದ್ಧ ನನ್ನಾಗಿಸುವದಿಲ್ಲ ಎನ್ನುವದು ಆತನ ಬೋಧನೆಯಾಗಿತ್ತು. ಪರಿಶುದ್ಧತೆ ಹೊರಗಿನಿಂದ ಬರುವಂತದಲ್ಲ, ಆದರೆ ಅದು ಒಳಗಿನಿಂದ ಮುನ್ನಡೆದು ಹೊರಗೆ ಬರುತ್ತದೆ (23:25-28). ಕೆಟ್ಟತನವು ಹೃದಯದಲ್ಲಿ ಉತ್ಪತ್ತಿಯಾಗುತ್ತದೆ, ಮತ್ತು ಕೆಟ್ಟತನವು ಒಬ್ಬನ ಮಾತಿನಲ್ಲಿ ಹೊರಬರುತ್ತದೆ (12:34, 35; 15:19, 20; ಎಫೆಸ 4:29; ಯಾಕೋಬ 3:6).

**ವಚನ 12. ಶಿಷ್ಯರು** ಬಂದು ನಿಮ್ಮ ಮಾತುಗಳನ್ನು **ಕೇಳಿ ಫರಿಸಾಯರು ಬೇಸರ ಗೊಂಡರೆಂದು ಆತನಿಗೆ ತಿಳಿಸಿದರು.** ಗ್ರೀಕ್ ಶಬ್ದ "ಉಲ್ಲಂಘಿಸು" (*skandalizō*) ಹೆಚ್ಚಾಗಿ "ಪಾಪಕ್ಕೆ ಕಾರಣ" ಎಂದಾಗುತ್ತದೆ. ಆದರೂ, ಈ ಪದವು ನಿಷ್ಕ್ರಿಯೆಯಾಗಿರುವಾಗ "ಆತಂಕಗೊಳ್ಳು," "ಅಘಾತ," ಅಥವಾ "ಕೋಪಗೊಳ್ಳು." ಎಂದು ಅರ್ಥಕೊಡುತ್ತದೆ, ಅದೇ ಸಮಯದಲ್ಲಿ ಮುಂದಿನ ವಚನದಲ್ಲಿ ಯೇಸು ಹೇಳಿದ ಮಾತುಗಳು ಅನೇಕ ಫರಿಸಾಯರಿಗೆ ಮನನೋಯಿಸುವಂತವುಗಳಾಗಿದ್ದವು, "ಈ ಹೇಳಿಕೆ" ಸನ್ನಿವೇಶಕ್ಕೆ ಅನುಗುಣವಾಗಿ ವಚನ 11ರಲ್ಲಿರುವ ಹೇಳಿಕೆಯನ್ನು ಸೂಚಿಸುತ್ತದೆ. ಸಾಂಪ್ರದಾಯಿಕವಾಗಿ ಕೈತೊಳೆಯುವ ಅತಿಜಾಗರೂಕತೆಯಿಂದ ಆಚರಿಸುವ ಆಚರಣೆಯು ಸ್ವಲ್ಪವಾದರೂ ಆತ್ಮೀಕ ಮೌಲ್ಯವನ್ನು ಹೊಂದಿರುವದಿಲ್ಲ. ಅವರಿಗೆ ಬಹಳ ಹೆಮ್ಮೆಯ ವಿಷಯವಾಗಿದ್ದ - ಈ ಅಭ್ಯಾಸವು - ಸಮಯ ಮತ್ತು ಶಕ್ತಿಯನ್ನು ವ್ಯರ್ಥಮಾಡುವಂಥದ್ದಾಗಿತ್ತು. ಅವರ ಸಂಪ್ರದಾಯಗಳಿಗೆ ಅಪನಂಬಿಕೆಯನ್ನು ತೋರಿಸುವದರ ಮೂಲಕ ಯೇಸು ಫರಿಸಾಯರ ಅಧಿಕಾರವನ್ನು ಕಡಿದು ಹಾಕುತ್ತಿದ್ದಾನೆ.

ಶಿಷ್ಯರು ನಾಯಕರ ಪ್ರತಿಕ್ರಿಯೆಯನ್ನು ನೋಡಿ ಚಿಂತಿತರಾಗುವ ಮೂಲಕ ತಮ್ಮ ಆತ್ಮೀಕ ಪ್ರಭುದ್ಧತೆಯ ಕೊರತೆಯನ್ನು ಪ್ರಕಟಿಸಿದರು. ಯೇಸು ರಾಜಕೀಯ ತಿದ್ದುಪಡಿ ಮಾಡುವದರಲ್ಲಿ ಕಳಕಳಿ ಉಳ್ಳವನಾಗಿರಲಿಲ್ಲ; ಆತನು ಸತ್ಯದ ಕುರಿತು ಕಾಳಜಿ ಉಳ್ಳವನಾಗಿದ್ದನು. ಅವನ ಮಾತುಗಳು ಫರಿಸಾಯರ ಮನಸ್ಸಿಗೆ ನೋವನ್ನುಂಟು ಮಾಡುತ್ತದೆ ಎಂಬುದನ್ನು ಬಲ್ಲವನಾಗಿದ್ದನು. ಸತ್ಯವು ಕೆಲವೊಮ್ಮೆ ನೋವನ್ನುಂಟು ಮಾಡುತ್ತದೆ; ನಿಜವಾಗಿ, ಹಲವು ಸಾರಿ ಅದು ಜನರಿಗೆ ನೋವನ್ನುಂಟು ಮಾಡುತ್ತದೆ. ಸತ್ಯವನ್ನು ಯಾವಾಗಲೂ ಪ್ರೀತಿ ಪೂರ್ವಕವಾಗಿ ಹೇಳಬೇಕು (ಎಫೆಸ 4:15), ಆದರೆ ರಕ್ಷಣೆಯ ಸತ್ಯವನ್ನು ಹೇಳಲೇಬೇಕು ಇಲ್ಲವಾದಲ್ಲಿ ದೊಡ್ಡ ನಷ್ಟ ಉಂಟಾಗುತ್ತದೆ (1 ತಿಮೊಥೆ 2:4).

**ವಚನ 13.** ಯೇಸು ಶಿಷ್ಯರಿಗೆ, **ಪರಲೋಕದಲ್ಲಿರುವ ನನ್ನ ತಂದೆಯು ನೆಡದೆ ಇರುವ ಗಿಡಗಳೆಲ್ಲಾ ಬೇರಿನೊಂದಿಗೆ ಕಿತ್ತು ಹಾಕಲ್ಪಡುವವು ಎಂದು ಹೇಳಿದನು.** ಈ ಹೇಳಿಕೆಯ ಅರ್ಥ ತಂದೆಯಿಂದ ಬರದೆಯಿರುವ ಯಾವುದು ಬಾಳುವದಿಲ್ಲ. "ಪರಲೋಕದಲ್ಲಿರುವ ನನ್ನ ತಂದೆ" ಈ ವಾಕ್ಯಭಾಗವು ಯೇಸು ಮತ್ತು ದೇವರ ನಡುವೆ ಇರುವ ಆತ್ಮೀಯ ಬಾಂದವ್ಯವನ್ನು ಸೂಚಿಸುತ್ತದೆ (ನೋಡಿರಿ 18:35). ಈ ಸಂಬಂಧದ ಕಾರಣದಿಂದಾಗಿ, ಯೇಸು ಯೆಹೂದ್ಯ ನಾಯಕರೊಂದಿಗೆ ಅಧಿಕಾರದಿಂದ ಮಾತನಾಡುತ್ತಿದ್ದನು (ನೋಡಿರಿ 7:28, 29).

"ಪ್ರತಿಯೊಂದು ಗಿಡ" ಇದು ಬಹುಶಃ ಫರಿಸಾಯರು ಬೋಧಿಸುತ್ತಿದ್ದ ಸುಳ್ಳು ಬೋಧನೆಯನ್ನು ಸೂಚಿಸುತ್ತದೆ. ಮಾನವ ನಿರ್ಮಿತ ಸಂಪ್ರದಾಯಗಳು ದೇವರು ನೆಡದೆ ಇರುವ ಗಿಡಗಳಾಗಿವೆ. ದೇವರ ಸತ್ಯದಿಂದಾಗಿ ಅವು ಬೇರಿನೊಂದಿಗೆ ಕಿತ್ತುಹಾಕಲ್ಪಡುವವು, ಯಾಕೆಂದರೆ ಆತನ ಸತ್ಯವು ನಿರಂತರಕ್ಕೂ ಇರುವಂತದ್ದು. ಆ ಶಾಶ್ವತವಾದ ಸತ್ಯವು ಯೇಸುವಿನ ಸೇವೆಯ ಮೂಲಕ ಪ್ರಕಟವಾಯಿತು.

ಇನ್ನೊಂದು ಸಾಧ್ಯತೆ ಎಂದರೆ, "ಪ್ರತಿಯೊಂದು ಗಿಡ" ತಮ್ಮ ಸಂಪ್ರದಾಯವನ್ನು ದೇವರ ವಾಕ್ಯದೊಂದಿಗೆ ಬದಲಿಸುವ ಫರಿಸಾಯರನ್ನು ಸೂಚಿಸುತ್ತದೆ. ಹಳೆ ಒಡಂಬಡಿಕೆಯಲ್ಲಿ, ದೇವ ಜನರನ್ನು ಆತನ "ಗಿಡಗಳು" ಅಥವಾ ಆತನಿಂದ "ನೆಡಲ್ಪಟ್ಟ" ಎಂದು ಸೂಚಿಸಲಾಗಿದೆ (ಯೆಶಾಯ 5:2, 7; 60:21; 61:3; ಯೆಹೆಜ್ಕೇಲ 17:22, 23). ಗಿಡ ನೆಡುವದು ಮತ್ತು ಬೇರು

ಸಹಿತ ಕೀಳುವದು ಎಂಬ ಸಾದೃಶ್ಯಗಳು ಯೆರೆಮೀಯ ಗ್ರಂಥದಲ್ಲಿ ಪ್ರಧಾನ್ಯತೆ ಹೊಂದಿರುತ್ತವೆ (ಯೆರೆಮೀಯ 1:10; 2:21; 11:17; 12:2; 18:7, 9; 24:6; 31:28; 32:41; 42:10; 45:4). ಒಂದು ವೇಳೆ "ಪ್ರತಿಯೊಂದು ಗಿಡ" ಫರಿಸಾಯರನ್ನು ಸೂಚಿಸಿದರೆ "ಬೇರಿನೊಂದಿಗೆ ಕಿತ್ತು ಹಾಕಲ್ಪಡುವದು" ಅವರ ನ್ಯಾಯತೀರ್ಪನ್ನು ಸೂಚಿಸುತ್ತದೆ (ನೋಡಿರಿ 3:7-12; 13:24-30, 36-43). ಈ ಎರಡು ದೃಷ್ಟಿಕೋನಗಳು ಈ ಅರ್ಥದಲ್ಲಿ ಒಳಗೊಂಡಿವೆ.

**ವಚನ 14.** ತನ್ನ ಶಿಷ್ಯರಿಗೆ ಕರ್ತನ ಎಚ್ಚರಿಕೆ **ಅವರ ಮಾತನ್ನು ಬಿಡಿರಿ** ಎಂಬುದಾಗಿತ್ತು. ಶಿಷ್ಯರು ಫರಿಸಾಯರ ಸ್ಥಾನವನ್ನಾಗಲಿ ಅಥವಾ ಆಸಕ್ತಿಯನ್ನಾಗಲಿ ಸಂರಕ್ಷಿಸುವ ಅಗತ್ಯವಿರಲಿಲ್ಲ (15:12). ಅವರು ಈ ಧಾರ್ಮಿಕ ಮನುಷ್ಯರಿಂದ ದೂರ ಇರಬೇಕಾಗಿತ್ತು, ಅವರು ಇವರಿಗೆ ನೀಡಲು ಏನೂ ಇರಲಿಲ್ಲ. ನಂತರ ಯೇಸು ಶಿಷ್ಯರನ್ನು "ಫರಿಸಾಯರ ಹುಳಿ ಹಿಟ್ಟಿನ" ಅವರ ಬೋಧನೆಗಳ ವಿಷಯದಲ್ಲಿ ಎಚ್ಚರಿಸಿದನು (16:11, 12). ಈ ಎಚ್ಚರಿಕೆಯನ್ನು ನೀಡಲು ಆತನಿಗಿರುವ ಅವಶ್ಯಕತೆ ಯೆಹೂದಿ ಜನರ ಮೇಲೆ ಫರಿಸಾಯರ ಬಲವಾದ ಪ್ರಭಾವವನ್ನು ಸೂಚಿಸುತ್ತದೆ (ನೋಡಿರಿ ಯೋಹಾನ 7:13; 9:22; 12:42; 19:38, 39).

ಫರಿಸಾಯರು ತಮ್ಮನ್ನು ತಾವು "ಕುರುಡನಿಗೆ ದಾರಿತೋರಿಸುವವರು" ಎಂದು ಕೊಂಡಿದ್ದರು, ಆತ್ಮೀಕವಾಗಿ ಕತ್ತಲಲ್ಲಿರುವವರಿಗೆ ಬೆಳಕಾಗಿದ್ದೇವೆ ಅಂದುಕೊಂಡಿದ್ದರು (ರೋಮಾಪುರ 2:19). ಯೇಸು **ಕುರುಡನು ಕುರುಡನಿಗೆ ದಾರಿತೋರಿಸುವವನಂತೆ** ಎಂಬ ಪ್ರತಿಪಾದನೆಯನ್ನು ಉಪಯೋಗಿಸಿದನು (23:16, 24; ನೋಡಿರಿ ಯೋಹಾನ 9:39, 40). ಪಾಲೇಸ್ತೀನದಲ್ಲಿ ಮೊದಲನೇ ಶತಮಾನದಲ್ಲಿ ಕಣ್ಣಿನ ರೋಗಗಳು ಪ್ರಬಲವಾಗಿತ್ತು, ಕುರುಡ ಭಿಕ್ಷುಕರು ಸಾಮಾನ್ಯವಾಗಿದ್ದರು.[21] ಇದರ ಪರಿಣಾಮವಾಗಿ, ಈ ಜನರಿಗೆ ಸ್ಥಳದಿಂದ ಸ್ಥಳಕ್ಕೆ ಹೋಗುವದಕ್ಕೆ ಮಾರ್ಗದರ್ಶನ ನೀಡಲು ಇತರ ಅವಶ್ಯಕತೆಯಿತ್ತು. ಆದರೂ, ಒಬ್ಬ ಕುರುಡನು ಇನ್ನೊಬ್ಬ ಕುರುಡನಿಗೆ ದಾರಿ ತೋರಿಸುವದು ದೊಡ್ಡ ದುರಂತವಾಗಿತ್ತು ಯಾಕಂದರೆ, **ಇಬ್ಬರೂ ಕುಣಿಯಲ್ಲಿ ಬೀಳುವರು** (ನೋಡಿರಿ ಲೂಕ 6:39). ಫರಿಸಾಯರು ತಾವೇ ಸತ್ಯವನ್ನು ಅರಿತಿರಲಿಲ್ಲ; ಮತ್ತು ಅವರು ಇತರರನ್ನು ನಾಶನದ ಮಾರ್ಗದಲ್ಲಿ ನಡೆಸುತ್ತಿದ್ದರು. ಒಬ್ಬ ವ್ಯಕ್ತಿ ಸುಳ್ಳು ಬೋಧಕರನ್ನು ಅನುಸರಿಸುತ್ತಿದ್ದರೆ, ಬೋಧಕನು ತೀರ್ಪಿಗೆ ಒಳಗಾಗುತ್ತಾನೆ ಹಿಂಬಾಲಕನು ಅಲ್ಲ ಎಂದು ಕೆಲವರು ನಂಬುತ್ತಿದ್ದರು. ಬೋಧಕ ಮತ್ತು ಹಿಂಬಾಲಕ ಇಬ್ಬರಿಗೂ ಸತ್ಯವನ್ನು ಸ್ವೀಕರಿಸುವ ಜವಬ್ದಾರಿಯಿದೆ ಎಂದು ಯೇಸು ಹೇಳಿದನು.

**ವಚನ 15. ಪೇತ್ರನು ಯೇಸುವಿಗೆ, ಈ ಸಾಮ್ಯದ ಅರ್ಥವನ್ನು ನಮಗೆ ಹೇಳು ಅಂದನು.** ಅನೇಕ ಸಂದರ್ಭಗಳಲ್ಲಿ, ಪೇತ್ರನು ಶಿಷ್ಯರ ಪರವಾಗಿ ಮಾತನಾಡುವವನಾಗಿದ್ದನು (ನೋಡಿರಿ 14:28ರ ಮೇಲಿನ ವ್ಯಾಖ್ಯಾನ). ಪೇತ್ರನು ಬೇರಿನೊಂದಿಗೆ ಕಿತ್ತು ಹಾಕಲ್ಪಡುವ ಮರದ ಕಲ್ಪನೆಯ ಕುರಿತು ಮಾತನಾಡುತ್ತಿದ್ದನೋ (15:13) ಅಥವಾ ಕುರುಡನು ಕುರುಡನಿಗೆ ದಾರಿ ತೋರಿಸುವವನ ಕುರಿತು ಮಾತನಾಡುತ್ತಿದ್ದನೋ (15:14)? ಯೇಸುವಿನ ಪ್ರತಿಕ್ರಿಯೆ (15:16-20) ಪೇತ್ರನು ಮೊದಲಿನ ಹೇಳಿಕೆಯನ್ನು ಪ್ರಸ್ತಾಪಿಸುತ್ತಿದ್ದಾನೆ ಬಾಯೊಳಗೆ ಹೋಗುವಂಥದ್ದು ಮನುಷ್ಯನನ್ನು ಹೊಲೆಮಾಡುವದಿಲ್ಲ: ಬಾಯೊಳಕ್ಕೆ ಹೊಗುವಂಥದು ಮನುಷ್ಯನನ್ನು ಹೊಲೆ ಮಾಡುವದಿಲ್ಲ; ಬಾಯೊಳಗಿಂದ ಹೊರಡುವಂಥದೇ ಮನುಷ್ಯನನ್ನು ಹೊಲೆ ಮಾಡುವದು (15:11). ಇಲ್ಲಿ "ಸಾಮ್ಯ" (*parabolē*) ಎಂಬ ಶಬ್ದವು ಗೂಡಾರ್ಥವುಳ್ಳ ಹೇಳಿಕೆಯನ್ನು ಪ್ರತಿನಿಧಿಸುತ್ತದೆ. ಯೇಸು ಆಗಾಗ್ಗೆ ಸಾಮ್ಯವನ್ನು ತನ್ನ ಶಿಷ್ಯರಿಗೆ ಅವರು ಏಕಾಂತದಲ್ಲಿದ್ದಾಗ ವಿವರಿಸುತ್ತಿದ್ದನು (13:36; ಮಾರ್ಕ 4:34).

**ವಚನ 16.** ಕರ್ತನು ತನ್ನ ಶಿಷ್ಯರಿಗೆ, **ನಿಮಗೂ ಇನ್ನು ಬುದ್ಧಿ ಇಲ್ಲವೆ? ಎಂದು ಕೇಳಿದನು.** ಅವರು ಯೇಸುವಿನೊಟ್ಟಿಗೆ ಅಷ್ಟು ದೀರ್ಘಕಾಲ ಇದ್ದರು ಆತನ ಜೀವಿತದ

ಶೈಲಿಯನ್ನು ವೀಕ್ಷಿಸುತ್ತಾ ಮತ್ತು ಆತನ ಬೋಧನೆಗಳನ್ನು ಆಲಿಸುತ್ತಾ ಇದ್ದರು. ಆತನು ಅವರು ತಿಳುವಳಿಕೆಯಲ್ಲಿ ಹೆಚ್ಚು ಬೆಳೆಯಬೇಕೆಂದು ನಿರೀಕ್ಷಿಸಿದ್ದನು. ಯೇಸುವಿನ ಪ್ರಶ್ನೆಯನ್ನು ಶಿಷ್ಯರ ಆತ್ಮೀಕ ಗ್ರಹಿಸುವಿಕೆಯ ಕೊರತೆಗೆ ಬಲವಾದ ಆಪಾದನೆ ಅಥವಾ ಕೇವಲ ಒಂದು ಸೂಕ್ಷ್ಮವಾದ ಎಚ್ಚರಿಕೆಯಾಗಿ ನೋಡಬೇಕೋ? ಆತನು ತನ್ನ ನಿರಾಶೆಯ ಮಟ್ಟವನ್ನು ಲೆಕ್ಕಕ್ಕೆ ತೆಗೆದುಕೊಳ್ಳದೇ ಯೇಸು ತಾಳ್ಮೆಯಿಂದ ಸಾಮ್ಯದ ಅರ್ಥವನ್ನು ಅವರಿಗೆ ವಿವರಿಸಿದನು.

**ವಚನ 17.** ಯೇಸು ಪ್ರಾರಂಭದಲ್ಲಿ ಸಾಮ್ಯದ ಮೊದಲನೆಯ ಸಾಲನ್ನು ಮಾತ್ರ ವಿವರಿಸಿದ್ದಾನೆ: "ಬಾಯೊಳಕ್ಕೆ ಹೋಗುವಂಥದ್ದು ಮನುಷ್ಯನನ್ನು ಹೊಲೆ ಮಾಡುವದಿಲ್ಲ" (15:11). ಈ ಸಮಯದಲ್ಲಿ ಆತನು ಅವರಿಗೆ, **ಬಾಯೊಳಕ್ಕೆ ಹೋಗುವಂಥದ್ದು ಹೊಟ್ಟೆಯಲ್ಲಿ ಸೇರಿ ಬಹಿರ್ದೇಶಕ್ಕೆ ಹೋಗುತ್ತದೆಂದು ನಿಮಗೆ ತಿಳಿಯಲಿಲ್ಲವೋ?** ಎಂದು ಕೇಳಿದನು. ಆಚರಣೆಯ ಪರಿಶುದ್ಧತೆಗಾಗಿ ಫರಿಸಾಯರ ಕೈತೊಳೆಯುವ ಸಂಪ್ರದಾಯ ಕೇವಲ ದೈಹೀಕ ಕ್ಷೇತ್ರಕ್ಕೆ ಸೀಮಿತವಾಗಿರುತ್ತದೆ. "ಕೈ ತೊಳೆಯದೆ ಮುಟ್ಟುವ ಆಹಾರವು ಬಾಯೊಳಕ್ಕೆ ಹೋಗುತ್ತದೆ" ಅದು "ಹೊಟ್ಟೆಯಲ್ಲಿ" ಪಚನವಾಗುತ್ತದೆ, ನಂತರ ಅದು "ಬಹಿರ್ದೇಶಕ್ಕೆ ಹೋಗುತ್ತದೆ." *Aphedrōn,* "ಪಾಯಿಕಾನೆಗೆ" (JNT) ಹೋಗುತ್ತದೆಂದು ಗ್ರೀಕ್ ಪಠ್ಯ ಹೇಳುತ್ತದೆ. ಕರ್ತನು ಕೈ ತೊಳೆಯದೇ ಊಟಮಾಡುವದು ಮನುಷ್ಯನ ಹೃದಯದ ಮೇಲೆ ಪರಿಣಾಮ ಬೀರುವದಿಲ್ಲ ಎಂಬುದಕ್ಕೆ ಒತ್ತು ನೀಡುತ್ತಾನೆ (ಮಾರ್ಕ 7:18).

**ವಚನ 18.** ಆತನ ಮುಂದಿನ ಹೇಳಿಕೆಯೊಂದಿಗೆ, ಯೇಸು ಸಾಮ್ಯದ ಎರಡನೆಯ ಸಾಲಿಗೆ ಸಾಲಿನತ್ತ ನಡೆದನು: "ಬಾಯೊಳಗಿಂದ ಹೊರಡುವಂಥವುಗಳು ಮನುಷ್ಯನನ್ನು ಹೊಲೆ ಮಾಡುತ್ತವೆ" (15:11). ಒಬ್ಬನು ಮಾತುಗಳು **ಹೃದಯದಿಂದ ಬರುತ್ತವೆ,** ಎಂಬುದಕ್ಕೆ ಆತನು ಒತ್ತು ನೀಡಿದನು. "ಹೃದಯವು" (*kardia*) ಮನುಷ್ಯನ ಆಂತರಿಕ ಜೀವದ ಕೇಂದ್ರವನ್ನು ಪ್ರತಿನಿಧಿಸುತ್ತದೆ; ಅದು ಮನುಷ್ಯನ ಭಾವನೆಗಳು, ಯೋಚನೆಗಳು, ಮನಸ್ಸಾಕ್ಷಿ ಮತ್ತು ಸಂಕಲ್ಪ ಸೂಚಿಸುತ್ತದೆ (ನೋಡಿರಿ 5:8; 6:21ರ ಮೇಲಿನ ವ್ಯಾಖ್ಯಾನ). ಮತ್ತಾಯನ ಸುವಾರ್ತೆಯ ಪ್ರಾರಂಭದಲ್ಲಿ ಯೇಸು ಫರಿಸಾಯರನ್ನು ಈ ಮಾತುಗಳಿಂದ ಗದರಿಸಿದನು: "ಎಲೈ ಸರ್ಪಜಾತಿಯವರೇ, ನೀವು ಕೆಟ್ಟವರಾಗಿರಲಾಗಿ ಒಳ್ಳೆಯ ಮಾತುಗಳನ್ನಾಡುವದಕ್ಕೆ ನಿಮ್ಮಿಂದ ಹೇಗಾದೀತು? ಹೃದಯದಲ್ಲಿ ತುಂಬಿರುವದೇ ಬಾಯಲ್ಲಿ ಹೊರಡುವದು" (12:34). ಒಬ್ಬ ವ್ಯಕ್ತಿಯ ಹೃದಯವು ಶುದ್ಧವಾಗಿರುವಾಗ, ಆತನ ಬಾಯೊಳಗಿಂದ ಹೊರಡುವ ಮಾತುಗಳು ಶುದ್ಧವಾಗಿರುತ್ತವೆ. ಹೃದಯವು ಕೆಟ್ಟದ್ದಾಗಿರುವಾಗ, ಬಾಯೊಳಗಿಂದ ಹೊರಡುವ ಮಾತುಗಳು ಕೆಟ್ಟವುಗಳಾಗಿರುತ್ತವೆ.

**ವಚನ 19.** ಕ್ರಿಸ್ತನು **ಹೃದಯದಲ್ಲಿ** ಉತ್ಪತ್ತಿಯಾಗುವ ಇತರ ವಿಧದ ದುಷ್ಟತನಗಳನ್ನು ಪಟ್ಟಿಮಾಡುವದನ್ನು ಮುಂದುವರಿಸಿದನು. ಈ ಪಟ್ಟಿಯಲ್ಲಿ ಕೆಟ್ಟ ಯೋಚನೆಗಳನ್ನು ಉಲ್ಲೇಖಿ ಸುವದನ್ನು ಹೊರತುಪಡಿಸಿ ಆತನು ದಶಾಜ್ಞೆಗಳ ಎರಡನೆಯ ಭಾಗಕ್ಕೆ ಹೋಗುತ್ತಾನೆ - ಅವು ಸಹ ಮಾನವನೊಂದಿಗೆ ಸಂಬಂಧದ ಕುರಿತಾಗಿವೆ: **ಕೊಲೆ, ವ್ಯಭಿಚಾರ, ಹಾದರತನ, ಕಳ್ಳತನ, ಸುಳ್ಳುಸಾಕ್ಷಿ, ಸುಳ್ಳು ಆರೋಪ** (ವಿಮೋಚನಕಾಂಡ 20:13-16).[22] ಈ ಎಲ್ಲಾ ಪಾಪಗಳನ್ನು ಹೊಸ ಒಡಂಬಡಿಕೆಯ ಇತರ ವಾಕ್ಯಭಾಗಗಳಲ್ಲಿ ಹೇಳಲಾಗಿದೆ (1 ಕೊರಿಂಥ 6:9, 10; ಪ್ರಕಟಣೆ 9:21; 21:8; 22:15). ಯೇಸು ಪರ್ವತ ಪ್ರಸಂಗದಲ್ಲಿ ಈಗಾಗಲೇ ಪಾಪವು ಹೃದಯದಿಂದ ಪ್ರಾರಂಭವಾಗುತ್ತದೆಂದು ಬೋಧಿಸಿದ್ದಾನೆ (5:21-48).

**ವಚನ 20.** ಕರ್ತನು ತನ್ನ ವಿವರಣೆಯನ್ನು ಶಿಷ್ಯರಿಗೆ ಈ ರೀತಿಯಾಗಿ ಹೇಳುವದರ ಮೂಲಕ ಮುಕ್ತಾಯ ಮಾಡಿದ್ದಾನೆ, **ಮನುಷ್ಯನನ್ನು ಕೆಡಿಸುವಂಥವುಗಳು ಇವೇ; ಆದರೆ ಕೈ ತೊಳಕೊಳ್ಳದೆ ಊಟಮಾಡುವದು ಮನುಷ್ಯನನ್ನು ಕೆಡಿಸುವದಿಲ್ಲ ಅಂದನು.** ನಿಜವಾದ ಪರಿಶುದ್ಧತೆ ಆತ್ಮದ ನಿಜ ಸ್ವರೂಪದ್ದಾಗಿರುತ್ತದೆ; ಅದು ಒಬ್ಬ ಮನುಷ್ಯನ ಹೃದಯ - ಆತನ ಆಲೋಚನೆ, ಭಾವನೆ, ಮನಸ್ಸಾಕ್ಷಿ ಮತ್ತು ಸಂಕಲ್ಪವನ್ನು ತೊಡಗಿಸಿಕೊಳ್ಳುತ್ತದೆ. ಈ

ಮೌಲ್ಯಮಾಪನವು ಫರಿಸಾಯರ ಆಚರಣೆಯ ಕುರಿತಾದ ಶುದ್ಧತೆಗೆ ವಿರೋಧವಾಗಿ ನಿಲ್ಲುತ್ತದೆ. ಕೈ ತೊಳೆಯದೇ ಇರುವದಕ್ಕೆ ಯೇಸುವಿನ ತೀರ್ಪು 15:2ರಲ್ಲಿರುವ ಆತನ ಶಿಷ್ಯರ ವಿರುದ್ಧವಾದ ಮೂಲ ಆಕ್ಷೇಪಣೆಗೆ ಸಂಪೂರ್ಣವಾಗಿ ಹಿಂತಿರುಗುತ್ತದೆ ಮತ್ತು ಮತ್ತಾಯನ ಮಂಡನೆಯ ಪ್ರಕಾರ, ವಿಚಾರಗಳ ಐಕ್ಯತೆಯನ್ನು ರಚಿಸುತ್ತದೆ (15:1-20).[23]

## ಪಾಠಗಳು

## ಪರಲೋಕಕ್ಕೆ ಅಡಚಣೆಯ ಮಾರ್ಗಗಳು (ಅಧ್ಯಾಯ 15)

ನಾವು ಲೋಕದ ಇಂದಿನ ಮನಸ್ಥಿತಿಯನ್ನು ದೂರವಿರಿಸಬೇಕು ಮತ್ತು ಪರಲೋಕವನ್ನು ತಲುಪದಂತೆ ಮಾರ್ಗದಲ್ಲಿ ಇರುವ ಅಡತಡೆಗಳನ್ನು ದೂರವಿರಿಸಬೇಕು. ಕೆಲವನ್ನು ಈಗ ಪರೀಕ್ಷಿಸೋಣ:

1. *ಮನುಷ್ಯರ ಸಂಪ್ರದಾಯಗಳು* (15:1-9). ನಾವು ದೇವರ ಚಿತ್ತದೊಂದಿಗೆ ಸಮರಸದಿಂದ ಇರದೇ ಇರುವ ಮಾನವ ಸಂಪ್ರದಾಯಗಳನ್ನು ತಿರಸ್ಕರಿಸಬೇಕು. ನಮ್ಮ ಆರಾಧನೆಯ ಅಭ್ಯಾಸಗಳಿಗೆ ಮತ್ತು ದೇವರ ಸೇವೆ ಮಾಡುವದಕ್ಕೆ ಇರುವ ಒಂದೇ ಅಧಿಕಾರ ದೇವರ ವಾಕ್ಯ ("ದೇವರು ಹೇಳಿದ್ದಾನೆ ..."). ಯೇಸು ಫರಿಸಾಯರಿಗೆ ಮತ್ತು ಶಾಸ್ತ್ರಿಗಳಿಗೆ, "ಆದರೆ ನೀವು ಹೇಳುತ್ತೀರಿ ..." (15:4, 5) ಅಂದನು. "ಅವರು ತಮ್ಮ ಸಂಪ್ರದಾಯಗಳಿಗಾಗಿ ದೇವರ ವಾಕ್ಯವನ್ನು ನಿರರ್ಥಕ ಮಾಡಿದ್ದಾರೆ" (15:6). ಯೇಸು ಯೆಶಾಯನ ಮಾತುಗಳನ್ನು ಉಪಯೋಗಿಸಿ, "ಮನುಷ್ಯರು ಕಲ್ಪಿಸಿದ ಕಟ್ಟಳೆಗಳನ್ನೇ ಅವರು ಬೋಧಿಸುವದರಿಂದ ನನಗೆ ಭಕ್ತಿ ತೋರಿಸುವದು ವ್ಯರ್ಥ" (15:9) ಎಂದು ಯೇಸು ಪ್ರಕಟಿಸುತ್ತಾನೆ.

2. *ಸುಳ್ಳು ಬೋಧಕರು* (15:12-14). "ಪರಲೋಕದಲ್ಲಿರುವ ನನ್ನ ತಂದೆಯು ನೆಡದೆ ಇರುವ ಗಿಡಗಳನ್ನೆಲ್ಲಾ ಬೇರಿನೊಂದಿಗೆ ಕಿತ್ತುಹಾಕಲ್ಪಡುವವು" (15:13) ಎಂದು ಯೇಸು ಹೇಳುತ್ತಾನೆ. ಆತನು "ಕುರುಡನು ಕುರುಡರಿಗೆ ದಾರಿ ತೋರಿಸುವದರ" ಕುರಿತಾಗಿ ಸಹ ಮಾತನಾಡುತ್ತಾನೆ (15:14). ನಾವು ವಾಕ್ಯಭಾಗದ ಆಧಾರಯಿಲ್ಲದೇ ಇರುವ ಜನಪ್ರಿಯ ನಂಬಿಕೆಗಳು ನಮಗೆ ಹೊಂದಿಕೆಯಾಗಿವೆ ಎಂದು ಬೈಬಲ್ ಸಿದ್ಧಾಂತಗಳನ್ನು ತೊರೆದು ಬಿಡಬಾರದು.

3. *ಪವಿತ್ರ ಜೀವಿತ* (15:10, 11, 17-20). ಯೇಸು "ಬಾಯೊಳಗಿಂದ ಹೊರಡುವಂಥದ್ದೇ ಮನುಷ್ಯನನ್ನು ಹೊಲೆಮಾಡುತ್ತವೆ" ಎಂದು ಬೋಧಿಸಿದ್ದಾನೆ (15:11); "ಬಾಯೊಳಗಿಂದ ಹೊರಡುವಂಥವುಗಳು ಹೃದಯದಿಂದ ಬರುತ್ತವೆ; ಅವು ಮನುಷ್ಯನನ್ನು ಹೊಲೆ ಮಾಡುವವು" (15:18). ನಂತರ ಆತನು ಕೆಟ್ಟ ಹೃದಯದಿಂದ ಬರುವ ಹೊಲೆಮಾಡುವ ಪಾಪಗಳ ಪಟ್ಟಿಯನ್ನು ನೀಡುತ್ತಾನೆ: "ಕೆಟ್ಟ ಯೋಚನೆಗಳು, ಕೊಲೆ, ವ್ಯಭಿಚಾರ, ಹಾದರ, ವ್ಯಭಿಚಾರ, ಕಳ್ಳತನ, ಸುಳ್ಳು ಸಾಕ್ಷಿ, ಬೈಗುಳ, ಹೊರಟು ಬರುತ್ತವೆ" (15:19).

4. *ಅಲ್ಪ ವಿಶ್ವಾಸ* (15:21-28). ತನ್ನಲ್ಲಿರುವ ನಂಬಿಕೆ ಮತ್ತು ಮಗಳ ಮೇಲಿರುವ ಪ್ರೀತಿಯಿಂದಾಗಿ ದೃಢವಾಗಿ ನಿಂತಕಾರಣದಿಂದಾಗಿ ಕಾನಾನ್ಯ ಸ್ತ್ರಿ ದೊಡ್ಡ ಆಶೀರ್ವಾದವನ್ನು ಹೊಂದಿಕೊಂಡಳು. ಅವಳು "ದೊಡ್ಡ ನಂಬಿಕೆ" ವಿಘ್ನಗಳೂ ಬಂದರೂ ದೊಡ್ಡ ಆಶೀರ್ವಾದ ಹೊಂದಿದಳು ಯಾಕೆಂದರೆ ಆಕೆಯ ವಿಶ್ವಾಸ ಮತ್ತು ಮಗಳ ಮೇಲಿನ ಪ್ರೀತಿಯಿಂದ ಹೊಂದಿದಳು. ಆಕೆಯ ದೊಡ್ಡ "ನಂಬಿಕೆ"ಗಾಗಿ ದೇವರಿಂದ ಪ್ರಶಂಸೆಗೆ ಒಳಗಾದಳು (15:28). ಇದಕ್ಕೆ ಭಿನ್ನವಾಗಿ, ಅನೇಕ ಯೆಹೂದ್ಯರು ಯೇಸುವಿನ ಬೋಧನೆಗಳನ್ನು ಮತ್ತು ಅದ್ಭುತಗಳನ್ನು ನಿರಾಕರಿಸಿದರು. ಆ ಸಮಯದಲ್ಲಿ ಆತನ ಸ್ವಂತ ಶಿಷ್ಯರು ಅವರ "ಅಲ್ಪ ವಿಶ್ವಾಸ" ಕ್ಕಾಗಿ ಗದರಿಸಲ್ಪಟ್ಟರು (6:30; 8:26; 14:31; 16:8; 17:20).

5. *ಜಟಿಲವಾದ ಜೀವನ ಶೈಲಿ* (15:32-39). ಜನರು ಆತನೊಟ್ಟಿಗೆ ಆಹಾರಕ್ಕಾಗಿ ಅಥವಾ

ಅನೂಕಲತೆಗಾಗಿ ಚಿಂತಿಸದೇ ಮೂರು ದಿನಗಳ ಕಾಲ ಇರುತ್ತಿರುವ ಹಾಗೆ ಯೇಸುವಿನ ಮೇಲೆ ಕೇಂದ್ರಿಕರಿಸಿದರು. ಅವರು ಆತ್ಮೀಕ ಆಹಾರಕ್ಕಾಗಿ ಹಸಿವೆ ಮತ್ತು ದಾಹವುಳ್ಳವರಾಗಿದ್ದರು. ಯೇಸುವನ್ನು ಹಿಂಬಾಲಿಸಲು ನಮಗೆ ಯಾವುದು ತಡೆಯಾಗಬಹುದು? ಲೋಕ ಕೇಂದ್ರಿಕೃತವಾದ ಗುರಿ ಮತ್ತು ಆಸಕ್ತಿಗಳಿಂದ ಸರಳವಾಗಿ ನಮ್ಮ ಲಕ್ಷವನ್ನು ಬೇರೆಡೆಗೆ ತಿರುಗಿಸಬಹುದು.

## ಸಂಪ್ರದಾಯ (15:1-9)

ಪ್ರಸಿದ್ಧ ಇತಿಹಾಸ ತಜ್ಞ ಮತ್ತು ತತ್ವಜ್ಞಾನಿ Will Durant ರವರು, "ಸಂಪ್ರದಾಯವು ಸಮಯದ ಧ್ವನಿಯಾಗಿದೆ, ಮತ್ತು ಸಮಯವು ಆಯ್ಕೆಯ ಮಾಧ್ಯಮವಾಗಿರುತ್ತದೆ; ಜಾಗ್ರತವಾದ ಮನಸ್ಸು ಅವರ ತೀರ್ಪವನ್ನು ಗೌರವಿಸುತ್ತದೆ, ಕೇವಲ ಯೌವನಸ್ಥರು ಇಪ್ಪತ್ತನೆಯ ಶತಮಾನಕ್ಕಿಂತಲೂ ಉತ್ತಮವಾಗಿ ತಿಳಿದುಕೊಳ್ಳುತ್ತಾರೆ."[24]

ಮತ್ತಾಯ 15:1-9ರಲ್ಲಿ ಸತ್ಯ ಮತ್ತು ಸಂಪ್ರದಾಯಗಳ ಮಧ್ಯದಲ್ಲಿರುವ ಪುರಾತನ ಘರ್ಷಣೆಯ ಮೇಲೆ ಬೆಳಕನ್ನು ಚೆಲ್ಲುತ್ತದೆ. ಯೇಸು ದೈವೀಕ ಸತ್ಯದ ಕುರಿತು ಕಳಕಳಿ ಉಳ್ಳವನಾಗಿದ್ದನು, ಆದರೆ ಆತನ ವೈರಿಗಳು ಮಾನವ ನಿರ್ಮಿತ ಸಂಪ್ರದಾಯಗಳ ಕುರಿತು ಕಳಕಳಿ ಉಳ್ಳವರಾಗಿದ್ದರು. ಆದರೂ ಆತನ ಕೈ ತೊಳೆಯುವ ಆಚಾರ ಪದ್ಧತಿಯನ್ನು ತಿರಸ್ಕರಿಸಿದಾಗ ಆತನು ಎಲ್ಲಾ ಸಂಪ್ರದಾಯಗಳನ್ನು ಖಂಡಿಸುತ್ತಿದ್ದನು. ಸತ್ಯವೇದದ ದಾಖಲೆಗೆ ಅನುಗುಣವಾಗಿ ಆತನು ಪಸ್ಕ ಹಬ್ಬದಲ್ಲಿ ಕನಿಷ್ಟ ಮೂರು ಸಾರಿ ಭಾಗವಹಿಸಿದನು. ಆತನು ಸಬ್ಬತ್ತ ದಿನದಲ್ಲಿ "ಅವರ ಪದ್ಧತಿಯ ಪ್ರಕಾರ" ದೇವಾಲಯಕ್ಕೆ ಹೋದನು (ಲೂಕ 4:16). ಆತನು ಯೆರೂಸಲೇಮಿನ ನೆರೆಹೊರೆಯಲ್ಲಿದ್ದಾಗ, ಆತನು ದೇವಾಲಯಕ್ಕೆ ಬೇಟಿ ನೀಡುತ್ತಿದ್ದನು. ಈ ಕೆಲವು ಸಂಗತಿಗಳು ಧರ್ಮಶಾಸ್ತ್ರದಲ್ಲಿ ಆಜ್ಞಾಪಿಸಲ್ಪಟ್ಟಿವೆ ಎಂದು ವಾದ ಮಾಡಲಾಗುತ್ತದೆ, ಅದು ಸತ್ಯವಾಗಿದೆ, ಆದರೆ ಅವೆಲ್ಲವು ಧಾರ್ಮಿಕ ಸಂಪ್ರದಾಯಗಳಾಗಿವೆ.

ನಾವು ಎಲ್ಲಾ ಸಂಪ್ರದಾಯಗಳನ್ನು ತಿರಸ್ಕರಿಸಲಾಗುವದಿಲ್ಲ. ದೇವರಿಂದ ಕೊಡಲ್ಪಟ್ಟವುಗಳನ್ನು ನಾವು ಅನುಸರಿಸಬೇಕು (1 ಕೊರಿಂಥ 11:2; 2 ಥೆಸಲೋನಿಕ 2:15; 3:6). ಮಾನವ ನಿರ್ಮಿತವಾದವುಗಳು, ಯಾರ ಮೇಲಾದರೂ ಒತ್ತಾಯ ಪೂರ್ವಕವಾಗಿ ಹೇಳಲಾಗದಿದ್ದರೂ, ಅವುಗಳನ್ನು ಕಾಪಾಡಿಕೊಳ್ಳಬೇಕು. ಮನುಷ್ಯರ ಸಂಪ್ರದಾಯಗಳಿಗೆ ಸ್ವಲ್ಪ ಬೆಲೆಯಿದೆ ಮತ್ತು ಕೇವಲ ಅವು ಹಳೆಯವುಗಳಾಗಿರುವದರಿಂದ ತಳ್ಳಿಬಿಡಬಾರದು.

ಸಂಪ್ರದಾಯಗಳನ್ನು ಆಚರಿಸುವದರಲ್ಲಿ ಅಪಾಯವಿಲ್ಲ; ಮಾನವ ಸಂಪ್ರದಾಯಗಳನ್ನು ನಿಯಮವೆಂದು ಪರಿಗಣಿಸುವದರಲ್ಲಿ ಅಪಾಯವಿದೆ ಅಥವಾ ದೇವರು ನೀಡಿದ ಅಭ್ಯಾಸಗಳನ್ನು ತೊರೆದುಬಿಡುವದಾಗಿದೆ. 15:1-9ರಲ್ಲಿ ಯೇಸು ಯಾವುದರ ಕುರಿತಾಗಿ ಹೆಚ್ಚು ಕಳಕಳಿ ಉಳ್ಳವನಾಗಿದ್ದಾನೆ, ಫರಿಸಾಯರು ತಮ್ಮ ಸಂಪ್ರದಾಯಗಳನ್ನು ದೇವರ ಆಜ್ಞೆಗಳಿಗಿಂತ ಹೆಚ್ಚು ಪ್ರಾಮುಖ್ಯತೆಯನ್ನು ನೀಡಿದ್ದರಿಂದಲೋ? ಜನರು ಹೀಗೆ ಮಾಡುವಾಗ ಅಪರಾಧ ಪ್ರಜ್ಞೆಯಿಂದ ನರಳುತ್ತಾರೆ.

## ಕೈ ತೊಳೆಯುವದು (15:2, 11)

ಇಂದಿನ ರೋಗಾಣುಗಳ ಸ್ವರೂಪ ನಮಗೆ ತಿಳಿದಿದೆ ಮತ್ತು ಊಟ ಮಾಡುವ ಮೊದಲು ನಾವು ಕೈ ತೊಳೆಯುವದರ ಮಹತ್ವವನ್ನು ಅರಿತಿದ್ದೇವೆ. ಯೇಸು ಕೈ ತೊಳೆಯುವದನ್ನು ಖಂಡಿಸುತ್ತಿಲ್ಲ ಅಥವಾ ಹೀಗೆ ಮಾಡುವದರಲ್ಲಿ ಒಬ್ಬ ವ್ಯಕ್ತಿ ವಿಫಲನಾಗುವಾಗ ರೋಗಕ್ಕೆ ತುತ್ತಾಗುವದಿಲ್ಲ ಎಂದು ಸೂಚಿಸುತ್ತಿಲ್ಲ. ಆತನು ವ್ಯಯಕ್ತಿಕ ಸ್ವಚ್ಛತೆಗಿಂತ ಹೆಚ್ಚಾಗಿ ಆಚರಣೆಯ ಶುದ್ಧತೆಗೆ ಪ್ರಾಮುಖ್ಯತೆಯನ್ನು ನೀಡುವ ಯೆಹೂದ್ಯರ ಅಭ್ಯಾಸದೊಂದಿಗೆ ವ್ಯವಹರಿಸುತ್ತಿದ್ದಾನೆ.

## ವ್ಯರ್ಥವಾದ ಆರಾಧನೆ (15:7-9)

ದೇವರು ನಮ್ಮ ಹೃದಯವನ್ನು ಬಯಸುತ್ತಾನೆ, ನಮ್ಮ ತುಟಿಗಳ ಆರಾಧನೆಯನ್ನು ಅಲ್ಲ (ರೋಮಾಪುರ 10:9, 10). ಆತನನ್ನು ನಾವು ಹೃದಯದಿಂದ ಪ್ರೀತಿಸಬೇಕೆಂದು ಬಯಸುತ್ತಾನೆ (22:37), ಹೃದಯದಿಂದ ಹಾಡುವದು (ಕೊಲಸ್ಸೆ 3:16), ಹೃದಯದಿಂದ ವಿಧೇಯರಾಗುವದು (ಎಫೆಸ 6:6), ಮತ್ತು ಹೃದಯದಿಂದ ನೀಡುವದು ಸಹ (2 ಕೊರಿಂಥ 9:7) "ಆತ್ಮದಿಂದ ಮತ್ತು ಸತ್ಯದಿಂದ ಆರಾಧಿಸುವ" ಆರಾಧನೆ ಹೃದಯದಿಂದ ಬರಬೇಕು (ಯೋಹಾನ 4:23, 24).

ನಿಜವಾದ ಆರಾಧನೆಗೆ ಭಿನ್ನವಾಗಿ, ಯೇಸು ಅವರ ಆರಾಧನೆಯ ಚಟುವಟಿಕೆಗಳನ್ನು "ವ್ಯರ್ಥ" ಎಂದು ಕರೆಯುತ್ತಾನೆ. ಇಂದು ಕೆಲವರು ನಾವು ದೇವರನ್ನು ಹೇಗೆ ಆರಾಧಿಸುತ್ತೇವೆ ಎಂಬುದು ಗಣನೆಗೆ ಬರುವದಿಲ್ಲ ಎಂದು ಭಾವಿಸುತ್ತಾರೆ. ಅವರು ನಾವು ಆರಾಧನೆಯ ರೂಪದಲ್ಲಿ ಏನನ್ನೇ ಅರ್ಪಿಸಿದರು ದೇವರು ದಯಾಳುವಾಗಿರುವದರಿಂದ ಸ್ವೀಕರಿಸುತ್ತಾನೆ ಎಂದು ಭಾವಿಸುತ್ತಾರೆ (ಮಲಾಕಿಯ 1:7-9).

ವಿಶೇಷವಾಗಿ, ಈ ಕಪಟಿಗಳು ಮಾಡುವ ಆರಾಧನೆ "ವ್ಯರ್ಥ" ವಾಗಿದೆ ("ನಿರರ್ಥಕವಾದದ್ದು"; "ನಿಷ್ಪ್ರಯೋಜಕವಾದದ್ದು") ಯಾಕೆಂದರೆ ಅವರು "ಸಿದ್ಧಾಂತಗಳನ್ನು ಮನುಷ್ಯರ ನಿಯಮಗಳಂತೆ ಬೋಧಿಸುತ್ತಾರೆ" (15:9). ಇಂದು ಅನೇಕ ಮಾನವ ನಿರ್ಮಿತ ಸಿದ್ಧಾಂತಗಳನ್ನು ಬೋಧಿಸಲಾಗುತ್ತಿದೆ ಮತ್ತು ಅವುಗಳಿಗೆ ದೇವರ ವಾಕ್ಯಕ್ಕಿಂತ ಹೆಚ್ಚಾದ ಪ್ರಾಮುಖ್ಯತೆಯನ್ನು ನೀಡಲಾಗುತ್ತಿದೆ. ಇಂತಹ ಸುಳ್ಳು ಬೋಧನೆಗಳನ್ನು ಹರಡುವವರು ದೇವರನ್ನು ಆರಾಧಿಸುವದು ವ್ಯರ್ಥ.

## ಆರಾಧನೆ (15:7-9)

"ಆರಾಧನೆ" "ದೈವತ್ವಕ್ಕೆ ಸಲ್ಲಿಸುವ ಗೌರವದ ಪ್ರೀತಿ ಮತ್ತು ಭಕ್ತಿಯಾಗಿದೆ ... ಉತ್ಸಾಹದ ಭಕ್ತಿ ಉಪಾಸನೆಯಾಗಿದೆ."[25] ಅರ್ಥವಿವರಣೆಯಂತೆ ಆರಾಧನೆ ದೇವರಿಗೆ ಕೇಂದ್ರಿಕೃತವಾಗಿರಬೇಕು ಮತ್ತು ಮಾನವ ಕೇಂದ್ರಿಕೃತವಲ್ಲ. ಆರಾಧನೆ ದೇವರು ಮತ್ತು ಆತನ ಮಗನು ಮಾಡಿರುವ ಮತ್ತು ಮಾಡುತ್ತಿರುವ ಎಲ್ಲದಕ್ಕಾಗಿ ಸ್ತೋತ್ರವನ್ನು ಸಲ್ಲಿಸುವದಾಗಿದೆ. ನಾವು "ತಂದೆಯೇ ನಿನಗೆ ಸ್ತೋತ್ರ!" ಮತ್ತು "ಯೇಸುವೇ ನಿನಗೆ ಸ್ತೋತ್ರ! ನೀನು ಎಷ್ಟೋ ಒಳ್ಳೆಯವನಾಗಿದ್ದೀ!" ಎಂದು ಹೇಳಲು ಒಂದು ಅವಕಾಶವಾಗಿದೆ. ಆರಾಧನೆ ನಮಗೆ ನೆಮ್ಮದಿ ದೊರೆಯಲಿ ಎಂಬ ಉದ್ದೇಶದಿಂದಲ್ಲ. ಖಂಡಿತವಾಗಿಯೂ, ದೇವರಿಗೆ ನೇರವಾಗಿ ಸಲ್ಲಿಸುವ ನಿಜವಾದ ಆರಾಧನೆ ಮಾಡುವವರನ್ನು ಪ್ರೀತಿ, ಸಂತೋಷ, ಮತ್ತು ಸಮಾಧಾನದಿಂದ ತುಂಬಿಸುತ್ತದೆ; ಆದರೆ ಇವು ನಮ್ಮ ಆತ್ಮೀಕ ಭಕ್ತಿಯ ಪರಿಣಾಮಗಳು.

ಅನೇಕರು ನಾವು ಪ್ರಾಮಾಣಿಕರಾಗಿದ್ದಲ್ಲಿ ಸಭೆಯಲ್ಲಿ ನಾವು ಆತನನ್ನು ಹೇಗೆ ಆರಾಧಿಸುತ್ತೇವೆ ಎಂಬುದು ಗಣನೆಗೆ ಬರುವದಿಲ್ಲ. ಜನರು ಆರಾಧನೆಯಲ್ಲಿ ವಿಧೇಶಿ, ದೇಶಿ ಅಥವಾ ಇನ್ನೊಂದು ಶೈಲಿಯನ್ನು ಬಯಸಿದರೆ ಅದು ಸರಿ ಎಂದು ಹೇಳುವವರಿದ್ದಾರೆ. ಅವರಿಗೆ ಒಬ್ಬರೇ, ನಾಲ್ವರು ಅಥವಾ ಸಮೂಹವಾಗಿ ಹಾಡಲು ಬಯಸಿದರೆ ಅದು ಸರಿ. ಅವರು ಗುಂಪಿನಲ್ಲಿ ವಾದ್ಯ ಸಂಗೀತ, ಅಥವಾ ಆರಾಧನೆಯಲ್ಲಿ ವಾದ್ಯಗಳ ಅನುಕರಣೆಯನ್ನು ಮಾಡುವ ಗುಂಪು ಇದ್ದರೆ ಅದು ಕೂಡ ಸರಿ. ಉಪದೇಶದ ಸ್ಥಾನದಲ್ಲಿ ಅವರಿಗೆ ಒಂದು ನಾಟಕವನ್ನು ಮಾಡುವ ಇಚ್ಛೆಯಿದ್ದಲ್ಲಿ ಅವರು ಅದನ್ನು ಮಾಡಬಹುದು. ಆರಾಧನೆ ಮನೋರಂಜನೆಯಲ್ಲ! ಅದು ಮನುಷ್ಯರನ್ನು ಸಂತೋಷಪಡಿಸಲು ರಚಿಸಿರುವದಲ್ಲ; ಇದು ದೇವರನ್ನು ಮೆಚ್ಚಿಸಲು ರಚಿಸಿರುವದಾಗಿದೆ.

ದೇವರಿಗೆ ಯಾವಾಗಲು ಆರಾಧನೆಯ ಒಂದು ಯೋಜನೆ ಇದೆ. ಈ ದಿನಕ್ಕೆ ಆರಾಧನೆ ಯೋಜನೆಯಿಲ್ಲವೆಂದು ಯೋಚಿಸುವದು ಕಾರಣವಲ್ಲದದ್ದು ಮತ್ತು ವೇದವಾಕ್ಯದ

ಆಧಾರವಿಲ್ಲದದ್ದು ಆಗಿರುತ್ತದೆ. ದೇವರು ಖಂಡಿತವಾಗಿಯೂ ಕಾಯಿನ ಮತ್ತು ಹೇಬೆಲರಿಗೆ ತನಗೆ ಯಜ್ಞದಲ್ಲಿ ಏನನ್ನು ಅರ್ಪಿಸಬೇಕೆಂದು ಬಯಸುತ್ತಾನೆ ಎಂಬುದನ್ನು ಹೇಳಿದನು (ಇಬ್ರಿಯ 11:4). ಹೇಬೆಲನು ವಿಧೇಯನಾದನು, ಆದರೆ ಕಾಯಿನನು ತಾನು ನಿರ್ಧರಿಸಿದ್ದನ್ನು ಆಯ್ದುಕೊಂಡನು ದೇವರು ಹೇಬೆಲನ ಕಾಣಿಕೆಯನ್ನು ಸ್ವೀಕರಿಸಿದನು ಮತ್ತು ಕಾಯಿನನ ಕಾಣಿಕೆಯನ್ನು ತಿರಸ್ಕರಿಸಿದನು (ಆದಿಕಾಂಡ 4:3-7). ನಾದಬ್ ಮತ್ತು ಅಬೀಹು, ಆರೋನನ ಇಬ್ಬರು ಮಕ್ಕಳು ಅವರು ಯಾಜಕರಾಗಿದ್ದರು (ವಿಮೋಚನಕಾಂಡ 24:9, 10), ಅವರು ಯೆಹೋವನು ಆಜ್ಞಾಪಿಸದೇ ಇದ್ದ "ಬೇರೆ ಬೆಂಕಿಯನ್ನು" ದೇವರ ಮುಂದೆ ಸಮರ್ಪಿಸಿದರು ಆಗ ಯೆಹೋವನು ಸನ್ನಿಧಿಯಿಂದ ಬಂದ ಬೆಂಕಿ ಅವರನ್ನು ನಾಶಮಾಡಿತು (ಯಾಜಕಕಾಂಡ 10:1, 2). ದೇವರು ದೂಪದ ವೇದಿಗೆ ಬೆಂಕಿಯನ್ನು ಹೊತ್ತಿಸಲು ವೇದಿಯಿಂದ ಬೆಂಕಿಯನ್ನು ಹೊಂದಬೇಕು ಮತ್ತು ಅನೇಕ ಪಂಡಿತರು ಇದನ್ನು ಮಾಡಲಿಲ್ಲ ಎಂಬುದನ್ನು ಒಪ್ಪುತ್ತಾರೆ. "ಬೇರೆ ಬೆಂಕಿ" ಯಾವುದೇ ಆಗಲಿ ಇದರ ಅರ್ಥ ಮೋಶೆಯ ಕಾಲದಲ್ಲಿ ಇದು ದೇವರ ಆರಾಧನೆ ಯೋಜನೆಯ ಭಾಗವಾಗಿರಲಿಲ್ಲ; ನಾದಾಬ್ ಮತ್ತು ಅಭಿಹೂ ತಮ್ಮ ಅವಿಧೇಯತೆಗೆ ದೊಡ್ಡ ಬೆಲೆಯನ್ನು ಹೊಂದಿದರು. ನಾವು ಮಾನ್ಯತೆಯನ್ನು ಹೊಂದಿದ ಅಪೊಸ್ತಲರ ಉದಾಹರಣೆಯ ಮೂಲಕ ಆದಿ ಸಭೆ ದೇವರನ್ನು ಹೇಗೆ ಆರಾಧಿಸಿತು ಎಂಬುದನ್ನು ಕಲಿಯುತ್ತೇವೆ (ನೋಡಿರಿ ಅಪೊಸ್ತಲರ ಕೃತ್ಯಗಳು 2:42; 20:7; 1 ಕೊರಿಂಥ 11:20-34; 14:15; 16:2). ಒಂದು ವೇಳೆ ಸಭೆ ಪ್ರೇರಣೆ ಹೊಂದಿದ ಜನರ ಮಾರ್ಗದರ್ಶನದಲ್ಲಿ ಕರ್ತನ ಪ್ರತಿಯೊಂದು ದಿನದಲ್ಲಿ ಹಾಡುವದರ, ಪ್ರಾರ್ಥಿಸುವದರ, ಕೊಡುಗೆಯನ್ನು ನೀಡುವದರ, ಅನ್ಯೋನ್ಯತೆಯ ಮತ್ತು ದೇವರ ಸಂದೇಶವನ್ನು ಆಲಿಸುವದರ ಮೂಲಕ ದೇವರನ್ನು ಆರಾಧಿ ಸಿದರೆ ಆ ವಿಧಾನವನ್ನು ಬದಲಿಸಲು ನಮಗೆ ಯಾವ ಅಧಿಕಾರವಿದೆ?

ಯೇಸು "ನಿಜವಾದ ಆರಾಧಕರು ... ದೇವರನ್ನು ಆತ್ಮದಿಂದ ಮತ್ತು ಸತ್ಯದಿಂದ ಆರಾಧಿಸಬೇಕು" ಎಂದು ಹೇಳುತ್ತಾನೆ (ಯೋಹಾನ 4:23, 24). "ಸತ್ಯದಲ್ಲಿ" ಆರಾಧಿಸುವದೆಂದರೆ ದೇವರ ವಾಕ್ಯಕ್ಕೆ ಅನುಗುಣವಾಗಿ ಯಾವುದು ಸತ್ಯವಾಗಿದೆಯೋ (ಯೋಹಾನ 17:17), ಮತ್ತು ಆತ್ಮದಿಂದ ಆರಾಧಿಸುವದು ಎಂದರೆ ಆತ್ಮದೊಂದಿಗೆ ಆರಾಧಿಸುವದಾಗಿದೆ (ವ್ಯಕ್ತಿಯ ಆಂತರ್ಯದಿಂದ) ಆರಾಧಿಸಬೇಕು ಎಂದರ್ಥವಾಗಿದೆ.[26] ಕೇವಲ ಹೊರಗಿನ ಚಲನೆ ಸಾಕಾಗುವದಿಲ್ಲ (ನೋಡಿರಿ ಮಲಾಕಿಯಾ 1:6-14). ನಾವು ಆತ್ಮದಲ್ಲಿ ಹೇಗೆ ಆರಾಧಿಸಬೇಕು? ಮೊದಲನೆಯದಾಗಿ, ನಮ್ಮ ವಿಚಾರಗಳು ದೇವರನ್ನು ಕೇಂದ್ರಿಕರಿಸಬೇಕು. ಎರಡನೆಯದಾಗಿ, ಬೋಧಿಸುವ ಸತ್ಯಗಳನ್ನು ಧ್ಯಾನ ಮಾಡಬೇಕು. ಮೂರನೆಯದಾಗಿ, ದೇವರನ್ನು ಮೆಚ್ಚಿಸಲು ಉತ್ಸಾಹದಿಂದ ಕೂಡಿದ ಇಚ್ಛೆ ಇರಬೇಕು. ನಾಲ್ಕನೆಯದಾಗಿ, ನಮ್ಮ ಆರಾಧನೆ ಪ್ರಾಮಾಣಿಕವಾಗಿರಬೇಕು. ನಮಗೆ ಹಾಡಲು ಉತ್ತಮವಾದ ಸ್ವರವಿಲ್ಲದೇ ಹೋಗಿರಬಹುದು ಅಥವಾ ವಾಕ್ಚಾತುರ್ಯದಿಂದ ಕೂಡಿದ ಪ್ರಾರ್ಥನೆ ಇರಲಿಕ್ಕಿಲ್ಲ ಆದರೆ ನಾವು ನಮ್ಮನ್ನು ಯಥಾರ್ಥರಲ್ಲದವರನ್ನಾಗಿ ಇಡಲು ಅನುಮತಿಸಬಾರದು.

ದೇವರು ಸುಳ್ಳು ಆರಾಧನೆಗಳನ್ನು, ಸ್ವಚಂದದ ಆರಾಧನೆಯನ್ನು ವ್ಯರ್ಥವಾದ ಆರಾಧನೆಯನ್ನು ಮತ್ತು ಸ್ವಾರ್ಥ-ಆರಾಧನೆಯನ್ನು ನಿಷೇಧಿಸುತ್ತಾನೆ. ಖಂಡಿತವಾಗಿಯೂ ಎಲ್ಲಾ ಆರಾಧನೆಗಳನ್ನು ದೇವರು ಸ್ವೀಕರಿಸುವದಿಲ್ಲ. ದೇವರು ನಮ್ಮ ಆರಾಧನೆಯ ಉದ್ದೇಶವಾಗಿರದೇ ಇರುವಾಗ, ನಾವು ನಮ್ಮ ಸ್ವಂತ ಮೌಲ್ಯಗಳಿಗೆ ಅನುಸಾರವಾಗಿ ಆರಾಧಿಸುವಾಗ, ನಮ್ಮಲ್ಲಿರುವ ಉತ್ತಮವಾದದ್ದನ್ನು ದೇವರಿಗೆ ಸಮರ್ಪಿಸದಿರುವಾಗ ಆತನು ಬಯಸಿದ್ದನ್ನು ಮಾಡುವದರಲ್ಲಿ ವಿಫಲರಾದಾಗ ಅಥವಾ ದೇವರು ಆಜ್ಞಾಪಿಸಿರುವದಕ್ಕಿಂತ ನಮ್ಮ ಆರಾಧನೆಯ ಶೈಲಿ ಪ್ರಾಮುಖ್ಯತೆಯನ್ನು ಹೊಂದುವಾಗ ನಮ್ಮ ಆರಾಧನೆ ಸ್ವೀಕರಿಸಲ್ಪಡುವದಿಲ್ಲ

## ನಾವು ಯಾರಿಗೆ ಕಿವಿಗೊಡಬೇಕು (15:12-14)

ಯೇಸುವಿನ ಶಿಷ್ಯರು ಅನೇಕ ಯೆಹೂದ್ಯರಿಂದ ಬಹಳವಾದ ಗೌರವವನ್ನು ಹೊಂದಿರುವ ಫರಿಸಾಯರ ಅಭಿಪ್ರಾಯದ ಕುರಿತು ಹೆಚ್ಚಿನ ಕಳಕಳಿಯುಳ್ಳವರಾಗಿದ್ದರು. ಆದರೂ ಯೇಸು ತನ್ನ ಹಿಂಬಾಲಕರಿಗೆ, ಅವರ ಮಾತನ್ನು ಬಿಡಿರಿ; "ತಾವೇ ಕುರುಡರು, ಮತ್ತೊಬ್ಬರಿಗೆ ದಾರಿ ತೋರಿಸುವದಕ್ಕೆ ಹೋಗುವರು" ಎಂದು ಹೇಳಿದನು (15:14). ಈ ಸುಳ್ಳು ಬೋಧಕರನ್ನು ಅನುಸರಿಸುವದು ಸ್ವತಃ ನಾಶನಕ್ಕೆ ನಡೆಸುತ್ತದೆ. ಇಂದು, ನಾವು ಸಹ ಸುಳ್ಳು ಬೋಧಕರ ವಿಷಯದಲ್ಲಿ ಎಚ್ಚರವಾಗಿರಬೇಕು ಮತ್ತು ಇತರರು ಬೋಧಿಸುವದನ್ನು ಯಾವಾಗಲೂ ದೇವರ ವಾಕ್ಯದ ಅಳತೆಗೋಲಿನಿಂದ ಅಳೆಯಬೇಕು. ಕ್ರಿಸ್ತೀಯ ನಂಬಿಕೆಗೆ ಇದೊಂದೇ ವಾಸ್ತವವಾದ ಅಳತೆಗೋಲಾಗಿದೆ. David Stewart

---

ಟಿಪ್ಪಣಿಗಳು

[1]Antiochus IV ("Epiphanes" ನೆಂದು ತನನ್ನನ್ನು ತಾನೇ ಕರೆದುಕೊಂಡನು, ಇದರ ಅರ್ಥ "the manifest god"), ಇವರು Seleucid ಚಕ್ರಾಧಿಪತಿಯಾಗಿ ಕ್ರಿ.ಪೂ. ಎರಡನೆಯ ಶತಮಾನದಲ್ಲಿ ಆಳಿದ್ದಾನೆ. ಆತನ ಕಾರ್ಯಗಳು ಪಾಲೇಸ್ತೀನ ಜಯಿಸುವಂತೆ ಮಾಡಿದವು ಅದರಿಂದ ಯೆಹೂದ್ಯರಿಗೆ ಬಹಳಷ್ಟು ಬೇಸರವುಂಟಾಯಿತು ಅವರು Maccabean ದಂಗೆಯ ಕುರಿತು ತೆಗೆದುಕೊಂಡು ಬಂದರು. [2]David Hill, *The Gospel of Matthew,* The New Century Bible Commentary (Grand Rapids, Mich.: Wm. B. Eerdmans Publishing Co., 1972), 250. [3]Leon Morris, *The Gospel According to Matthew,* Pillar Commentary (Grand Rapids, Mich.: Wm. B. Eerdmans Publishing Co., 1992), 389. [4]Mishnah *Aboth* 1.1. [5]Ibid. [6]Robert H. Mounce, *Matthew,* New International Biblical Commentary (Peabody, Mass.: Hendrickson Publishers, 1991), 148. [7]Josephus *Antiquities* 13.10.6 (emphasis added). [8]"Torah ಬೋಧನೆಗಿಂತಲೂ ಶಾಸ್ತ್ರಿಗಳ ಬೋಧನೆಗಳಿಗೆ ಕಟ್ಟುನಿಟ್ಟಿನ ನಿಯಮಗಳು ಅನ್ವಹಿಸುತ್ತವೆ" (Mishnah *Sanhedrin* 11.3; ನೋಡಿರಿ Talmud *Abodah Zarah* 35a; *Erubin* 21b). [9]Morris, 391. [10]Mishnah *Yadaim* 2.3.

[11]Michael J. Wilkins, "Matthew," in *Zondervan Illustrated Bible Backgrounds Commentary,* vol. 1, *Matthew*, *Mark*, *Luke*, ed. Clinton E. Arnold (Grand Rapids, Mich.: Zondervan, 2002), 95. ಒಬ್ಬ ರಬ್ಬಿ ಹೀಗೆ ಹೇಳಿದ್ದಾನೆ, "ಮಲೀನವಾದ ಒಬ್ಬ ವ್ಯಕ್ತಿ ದೇವಾಲಯದ ಸೇವೆಗೆ ಯೋಗ್ಯನಲ್ಲ, ಅದರಿಂದ ಕೃಪೆ ಎಂದು ಹೇಳಲು ಹೊಲಸಾದ ಕೈಗಳು ಯೋಗ್ಯವಲ್ಲ" (Talmud *Berakoth* 53b). [12]Talmud *Kiddushin* 31b; Jerusalem Talmud *Kiddushin* 1.7. [13]Jerusalem Talmud *Kiddushin* 1.7. [14]Mishnah *Nedarim* 5.6. [15]Wilkins, 96. [16]Mishnah *Nedarim* 9.1. [17]Hill, 251. [18]William Hendriksen, *New Testament Commentary: Exposition of the Gospel According to Matthew* (Grand Rapids, Mich.: Baker Book House, 1973), 614. [19]Craig S. Keener, *A Commentary on the Gospel of Matthew* (Grand Rapids, Mich.: Wm. B. Eerdmans Publishing Co., 1999), 412. [20]Jack P. Lewis, *A Commentary on the Gospel According to Matthew,* Part 2, The Living Word Commentary (Austin, Tex.: Sweet Publishing Co., 1976), 25.

[21]Morris, 396–97. [22]"ಸೂಳೆಗಾರಿಕೆ" ಮಾಡುವಿಕೆಯನ್ನು "ಹಾದರ" ಗುಂಪಿಗೆ ಸೇರಿಸಲಾಗಿದೆ, ಮತ್ತು "ಚಾಡಿಕೋರರ"ನ್ನು "ಸುಳ್ಳು ಸಾಕ್ಷಿಗಳ" ಗುಂಪಿಗೆ ಸೇರಿಸಲಾಗಿದೆ. [23]Hill, 252. [24]Will Durant, *The Story of Civilization,* vol. 3, *Caesar and Christ* (New York: Simon and Schuster, 1944, 1972), 295. [25]*American Heritage Dictionary,* 4th ed. (2001), s.v. "worship." [26]ಯೋಹಾನ 4ರ ಸನ್ನಿವೇಶದಲ್ಲಿ ಒತ್ತಿ ಹೇಳಿರುವ ನಿಜವಾದ ಆರಾಧನೆಯ ಕುರಿತು ನಿರ್ದಿಷ್ಟವಾದ ಸ್ಥಳದಿಂದ ದ್ಯಾನ ಮಾಡಿರುವದಿಲ್ಲ (ಯೆರೂಸಲೇಮ ಅಥವಾ ಗೆರೆಜೇಮ ಬೆಟ್ಟ), ಆದರೆ ಇದು ನಡೆದಿರುವದು ಒಬ್ಬ ವ್ಯಕ್ತಿಯ ಮುಖಾಂತರ (ಯೇಸು ಕ್ರಿಸ್ತನು). ಸತ್ಯದ, ಆತ್ಮೀಕ ಆರಾಧನೆ ಆತನ ಮುಖಾಂತರ ಮಾತ್ರ ಸಾಧ್ಯವಿದೆ (ಯೋಹಾನ 14:6, 13, 14; 16:23, 24; ಎಫೆಸ 5:19, 20; ಕೊಲಸ್ಸೆ 3:16, 17).